ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಸಿಡ್ನಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಶನಿವಾರ ನಡೆದ ಏಕದಿನ ಪಂದ್ಯದಲ್ಲಿ 9 ವಿಕೆಟ್‌ಗಳಿಂದ ಜಯಗಳಿಸಿದ ಭಾರತ ತಂಡ... ರೋಹಿತ್ ಶರ್ಮಾ ಹಾಗು ವಿರಾಟ್ ಕೊಹ್ಲಿ 2ನೇ ವಿಕೆಟ್‌ಗೆ 168 ರನ್ ಜೊತೆಯಾಟ...

26 ಅಕ್ಟೋಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 225 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಜಿಎಸ್‌ಟಿ 2.0 : ಜನರಿಗೆ ಲಾಭ ತಲುಪಿದೆಯೇ? » 2



ಚಹಾ-ಭಾರತೀಯರ ಮನಗೆದ್ದ ಮಸಾಲೆಭರಿತ ಪಾನೀಯ » 3



ಮೌಲ್ಯಯುತ ಶಿಕ್ಷಣದ ಜೊತೆಗೆ ವಿವೇಕವೂ ಮುಖ್ಯ » 4

# ಮುಂದಿನ ಸರ್ಕಾರ ನಮ್ಮದೇ: ಹೆಚ್.ಡಿ.ಕೆ.

## ಖಾತೆ ಬದಲಾವಣೆಗೆ ಹಣ ಕೊಡಬೇಡಿ | ಇದು ಹಗಲು ದರೋಡೆ, ಲೂಟಿಕೋರ ಸರ್ಕಾರ

• ಪ್ರಜೋದಯ ವರದಿ

**ಬೆಂಗಳೂರು:** ಮುಂದಿನ ಎರಡು ವರ್ಷದ ಬಳಿಕ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬರಲಿದ್ದು ಬಿ ಖಾತಾಯಿಂದ ಎ ಖಾತಾ ಮಾಡಿಕೊಡುತ್ತೇವೆಂದು ಸುಲಿಗೆ ಮಾಡುತ್ತಿರುವವರಿಗೆ ಹಣ ಕೊಡಬೇಡಿಯೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ. ಬಿ ಖಾತಾಯಿಂದ ಎ ಖಾತಾ ಮಾಡಿಕೊಡುತ್ತೇವೆಂದು ಪ್ರತಿ ನಿವೇಶನಕ್ಕೆ 5 ರಿಂದ 30 ಲಕ್ಷ ರೂ. ಸುಲಿಗೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಯಾರೂ ಅದಕ್ಕಾಗಿ ಹಣ ಚೆಲ್ಲಬೇಡಿ, ಮೋಸ ಹೋಗಬೇಡಿ. ಎರಡು ವರ್ಷದ ನಂತರ ನಮ್ಮ ಸರ್ಕಾರ ಬರುತ್ತದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಎ ಖಾತಾ ಮಾಡಿಕೊಡು ತ್ತೇವೆಂದರು.

ಕಾಂಗ್ರೆಸ್ ಸರ್ಕಾರ ಹಗಲು ದರೋಡೆ ಮಾಡುತ್ತಿದೆ. ಜನರನ್ನು ಸುಲಿಗೆ ಸರಕನ್ನಾಗಿ



ಮಾಡಿ ಕೊಂಡಿದೆ. ಯಾವ ಕಾರಣಕ್ಕೂ ಒಂದು ನಯಾಪೈಸೆ ಕಟ್ಟಬೇಡಿ. 2 ವರ್ಷ ಖಾತೆ ಮಾಡಿಸಿಕೊಳ್ಳಬೇಡಿ. ಅವರ ಮಾತಿಗೆ ಮರುಳಾಗಬೇಡಿ. ನಿಮ್ಮನ್ನು ಉಳಿಸುವ, ಹಿತ ಕಾಯುವ ಜವಾಬ್ದಾರಿ ನಮ್ಮದು ಎಂದು ವಾಗ್ದಾನ ನೀಡಿದರು.

**ಲಕ್ಷ ಲಕ್ಷ ರೂ. ಲೂಟಿ**

ಹೆಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿ ಆಗಿದ್ದಾಗ ಪ್ರತಿ ಚದರ ಅಡಿಗೆ 110 ರೂ. ನಿಗದಿ ಮಾಡಿ, ಈ ಕೆಲಸ ಮಾಡಿಕೊಡಲು ಆದೇಶ ಹೊರಡಿಸಿದ್ದರು. ನಾನು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಪ್ರತಿ ಚದರ ಅಡಿಗೆ 200 ರಿಂದ 600 ರೂ. ವರೆಗೆ ಶುಲ್ಕ ನಿಗದಿ ಮಾಡಿದ್ದೆವು. ಈ ಸರ್ಕಾರವು ಪ್ರತಿ ಚದರ ಅಡಿಗೆ ಸಾವಿರಾರು ರೂಪಾಯಿಗಳಂತೆ ಲಕ್ಷ ಲಕ್ಷ ಲೂಟಿ ಹೊಡೆಯಲು ಮುಂದಾಗಿ ದೆಯೆಂದು ಆರೋಪಿಸಿದರು.

ಈ ಸರ್ಕಾರದ ಆಡಳಿತದಿಂದ ಜನರು ಬೇಸತ್ತು ಹೋಗಿದ್ದಾರೆ. ಐದು ವರ್ಷ ನನಗೆ ಆಡಳಿತ ನೀಡಿದರೆ ಎಲ್ಲವನ್ನೂ ಸರಿ ಮಾಡುತ್ತೇನೆ. ಈ ಹಿಂದೆ ನೀಡಲಿಲ್ಲ, ಆದರೆ ಈ ಬಾರಿ ಖಂಡಿತಾ ಸರ್ಕಾರ ರಚಿಸುತ್ತೇವೆ. ಕಾಂಗ್ರೆಸ್ ಸರ್ಕಾರ ತಂದಿರುವ ಬಿ ಯಿಂದ ಎ ಖಾತಾ ಪರಿವರ್ತನೆಯನ್ನು ಅತ್ಯಂತ ಕಡಿಮೆ ವೆಚ್ಚದಲ್ಲೇ ಮಾಡಿಕೊಡುತ್ತೇವೆಂದು ಕುಮಾರಸ್ವಾಮಿ ಹೇಳಿದರು.

ನಮ್ಮದು ಸ್ವತಂತ್ರ ಸರ್ಕಾರ ಬರುತ್ತದೆಯೋ ಅಥವಾಮೈತ್ರಿ ಸರ್ಕಾರ ಬರುತ್ತದೆಯೋ ಎಂಬುದನ್ನು ಜನರು ನಿರ್ಧರಿಸಲಿದ್ದಾರೆ. ಈ ಕ್ಷಣದವರೆಗೂ ಜೆಡಿಎಸ್-ಬಿಜೆಪಿ ಮೈತ್ರಿ ಚೆನ್ನಾಗಿಯೇ ಇದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಖಾತಾ ಪರಿವರ್ತನೆ ಬಗ್ಗೆ ಬಹಿರಂಗ ಚರ್ಚೆಗೆ ಡಿ.ಕೆ.ಶಿವಕುಮಾರ್ ಅವರು ಆಹ್ವಾನನೀಡಿರುವ ಬಗ್ಗೆ ಪ್ರಶ್ನಿಸಿದಾಗ, ಬಿ ಮತ್ತು ಎ ಖಾತಾ ಬಗ್ಗೆ ಬಹಿರಂಗ ಚರ್ಚೆಗೆ ಆಹ್ವಾನ ನೀಡಲು ಅವರು ಯಾರು. ನನ್ನನ್ನು ಚರ್ಚೆಗೆ ಕರೆಯುವ ಅಥವಾ ಚರ್ಚಿಸುವ ಯೋಗ್ಯತೆ ಆ ವ್ಯಕ್ತಿಗೆ ಇಲ್ಲ. ಅವರು ಎಲ್ಲೆಲ್ಲಿ ಏನೇನೂ ಲೂಟಿ ಹೊಡೆದಿದ್ದಾರೆ ಎಂಬುದನ್ನು ಬಿಚ್ಚಿಡುತ್ತೇನೆಂದು ಹರಿಹಾಯ್ದರು.

**ಬಹಿರಂಗ ಚರ್ಚೆಗೆ ಆಹ್ವಾನ**

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆ, ವಾದ ವಿವಾದ ಇರಬೇಕು. ಹಿಟ್ ಅಂಡ್ ರನ್, ಬ್ಲ್ಯಾಕ್‌ಮೇಲ್ ಮಾಡು ವುದಲ್ಲ. ಕುಮಾರಸ್ವಾಮಿ ನನ್ನ ವಿರುದ್ಧ ಇರುವ ದಾಖಲೆ ತಂದು ಬಹಿರಂಗ ಚರ್ಚೆಯಲ್ಲಿ ಭಾಗವಹಿಸಲಿ ಎಂದು ಸವಾಲೆಸೆದರು.

ಕುಮಾರಸ್ವಾಮಿ ಬಳಿ ಸಾಕ್ಷಿಗುಡ್ಡೆ ಇದ್ದರೆ, ಜನರಿಗೆ, ರಾಜ್ಯಕ್ಕೆ ಒಳ್ಳೆಯದು ಮಾಡಿದ್ದರೆ ಅದನ್ನು ದಾಖಲೆ ಸಮೇತ ಬಂದು ಹೇಳಲಿ. ಜನರು ಅವರಿಗೆ ಮತ ಕೊಟ್ಟು ದೊಡ್ಡ ಹುದ್ದೆ ನೀಡಿದ್ದಾರೆ. ಸಾರ್ವಜನಿಕವಾಗಿ ಬಂದು ಉತ್ತರ ನೀಡಲಿ. ಕೇವಲ ಸುಳ್ಳು ಆರೋಪ ಮಾಡುತ್ತಾ, ಬೇರೆಯವರಿಗೆ ಹೆದರಿಸುತ್ತಾ ಹೋಗುವುದಲ್ಲ. ನಾನು ಏನು ಮಾಡಿದ್ದೇನೆ, ನನ್ನ ಹುಳುಕು ಏನಿದೆ ಎಂಬುದನ್ನು ನೀನು ಹೇಳು, ನಿನ್ನದು ಏನಿದೆ ಎಂದು ನಾನು ಹೇಳುತ್ತೇನೆ. ನಂತರ ಜನರು ತೀರ್ಮಾನ ಮಾಡುತ್ತಾರೆಂದು ಕುಮಾರಸ್ವಾಮಿ ಅವರಿಗೆ ಸವಾಲು ಹಾಕಿದರು.

ಎರಡು ವರ್ಷದ ನಂತರ ಇವರು ಸರ್ಕಾರ ರಚಿಸುವುದು ಇರಲಿ, ಜೆಡಿಎಸ್ 7-8 ಸ್ಥಾನಗಳಿಗೆ ಕುಸಿಯುತ್ತದೆ. ಅದನ್ನು ಮೊದಲು ನೋಡಿಕೊಳ್ಳಲಿ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> **ಸದನದಲ್ಲಿ ಜೇಬು ತೋರಿಸಿ ಪೆನ್ ಡ್ರೈವ್ ತೆಗೆಯುತ್ತೇನೆಂದು ಹೇಳಿದಂತೆ ಅಲ್ಲ. ಬಹಿರಂಗ ಚರ್ಚೆಗೆ ಬರಲಿ. ಅದರಲ್ಲಿ ಅವಮಾನ ಆಗುವಂತದ್ದು ಏನೂ ಇಲ್ಲ. ಅವರು ಮುಖ್ಯಮಂತ್ರಿ ಆಗಿದ್ದಾಗ ನಾನು ಸಾತನೂರಿಗೆ ಚರ್ಚೆಗೆ ಹೋಗಿದ್ದೆ. ಅದೇ ರೀತಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಬರಲಿ. -ಡಿ.ಕೆ. ಶಿವಕುಮಾರ್,** ಡಿಸಿಎಂ

# ಯತೀಂದ್ರಗೆ ನೋಟೀಸ್ ಕೊಡುವ ಧೈರ್ಯ ಇಲ್ಲವೇ

• ಪ್ರಜೋದಯ ವರದಿ

**ಬೆಂಗಳೂರು:** ಚಲನಚಿತ್ರ ಕಲಾವಿದರಿಗೆ, ಪಕ್ಷದ ಶಾಸಕರಿಗೆ, ಕಾರ್ಯಕರ್ತರಿಗೆ ಧಮ್ಕಿ ಹಾಕುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರಿಗೆ ನೋಟೀಸ್ ಕೊಡುವಷ್ಟು ಧೈರ್ಯ ಇಲ್ಲವಾ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಪ್ರಶ್ನಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಚಲನಚಿತ್ರ ಕಲಾವಿದರಿಗೆ ನಟ್ಟು ಬೋಲ್ಟ್ ಟೈಟ್ ಮಾಡ್ತೀನಿ ಅಂದಿದ್ದರು. ಅಧಿಕಾರ ಹಂಚಿಕೆ ಹಾಗು ಮುಖ್ಯಮಂತ್ರಿ ಬದಲಾ ವಣೆ ಕುರಿತು ಹೇಳಿಕೆ ನೀಡಿದ್ದ ಶಾಸಕರಿಗೆ ತಗ್ಗಿ-ಬಗ್ಗಿ ನಡೀಬೇಕು ಎಂದು ತಾಕೀತು ಮಾಡಿದ್ದರು. ನಿಮ್ಮ ಛತ್ರಿ ಬುದ್ಧಿ ಗೊತ್ತು ಎಂದು ಕಾರ್ಯಕರ್ತರಿಗೆ ಆವಾಜ್ ಹಾಕಿದ್ದರು. ಆದರೆ, ಕೆಪಿಸಿಸಿ ಅಧ್ಯಕ್ಷರಾಗಿ



ಯತೀಂದ್ರ ಅವರಿಗೆ ಒಂದು ನೋಟೀಸ್ ಕೊಡುವ ಧೈರ್ಯ ಇಲ್ಲವಾಗಿದೆ ಎಂದು ಟೀಕಿಸಿದ್ದಾರೆ. ಎಲ್ಲದಕ್ಕೂ ದೆಹಲಿ ಹೈಕಮಾಂಡ್ ಕಡೆಗೆ ನೋಡುವ ನಿಮ್ಮಂಥ ದುರ್ಬಲ ನಾಯ ಕರು ರಾಜ್ಯದ ಮುಖ್ಯಮಂತ್ರಿಯಾದರೆ ಕನ್ನಡಿಗರಿಗೆ ಏನು ಪ್ರಯೋಜನ. ಒಂದು ವೇಳೆ ತಾವು ಮುಖ್ಯಮಂತ್ರಿಯಾದರೂ ಸಿದ್ದರಾಮಯ್ಯ ಅವರೇ ಸೂಪರ್ ಮುಖ್ಯಮಂತ್ರಿಯಾಗಿ ಉಳಿಯುವುದರಲ್ಲಿ ಯಾವ ಅನುಮಾನ ಇಲ್ಲವೆಂದಿದ್ದಾರೆ.

# ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ: ಕೃಷ್ಣ ಬೈರೇಗೌಡ

## ಅರ್ಹರಿಗೆ ಅವಕಾಶ ನೀಡಲು ಸಂಪುಟ ಪುನಾರಚನೆಗೆ ನಿರ್ಧಾರ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ನವೆಂಬರ್‌ನಲ್ಲಿ ಕ್ರಾಂತಿ, ಅಧಿಕಾರ ಹಂಚಿಕೆ, ಸಂಪುಟ ಪುನಾರಚನೆ ಇತ್ಯಾದಿ ವಿಚಾರಗಳು ತೀವ್ರ ಚರ್ಚೆಯಲ್ಲಿರುವಾಗ ಕಂದಾಯ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ ಎಂಬ ಹೇಳಿಕೆ ಅಚ್ಚರಿಗೆ ಕಾರಣವಾಗಿದೆ.

ಶನಿವಾರ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಈಗಾಗಲೇ ಮೂರು ಬಾರಿ ಸಚಿವ ಸ್ಥಾನ ಪಡೆದಿದ್ದೇನೆ. ಪಕ್ಷ ನನಗೆ ಅರ್ಹತೆಗಿಂತ ಹೆಚ್ಚು ಅವಕಾಶ ನೀಡಿದೆ. ಹೈಕಮಾಂಡ್ ಹೇಳಿದರೆ ಈ ಸ್ಥಾನ ಬಿಡಲು ಸಿದ್ಧ, ಸಚಿವ ಸ್ಥಾನದಿಂದ ಕ್ಷೇತ್ರದಲ್ಲಿ ಸಂಪೂರ್ಣ ಕೆಲಸ ಮಾಡಲು ಆಗುತ್ತಿಲ್ಲ. ಅವಕಾಶದಲ್ಲಿ ನನಗೆ ಹೊಟ್ಟೆ ತುಂಬಿದೆ. ಆದರೆ, ಕೆಲಸದಲ್ಲಿ ಇನ್ನೂ ಬಾಕಿ. ಪಕ್ಷ ನನಗೆ ಎಲ್ಲವನ್ನೂ ನೀಡಿದೆ. ನನ್ನನ್ನು ಗುರುತಿಸಿ ಸಾಕಷ್ಟು ಅವಕಾಶ ಕೊಟ್ಟಿರುವುದಕ್ಕೆ ಆಭಾರಿಯಾಗಿದ್ದೇನೆಂದು ಭಾವುಕರಾಗಿ ಹೇಳಿದರು.



**ಸಂಪುಟ ಪುನಾರಚನೆ ನಿರ್ಧಾರ**

ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಎರಡೂವರೆ ವರ್ಷಗಳ ನಂತರ ಸಂಪುಟ ಪುನಾರಚನೆ ಬಗ್ಗೆ ನಿರ್ಧಾರವಾಗಿತ್ತು. ಹೊರಗಡೆ ಇರುವ ಅರ್ಹ ಶಾಸಕರಿಗೆ ಅವಕಾಶ ಕೊಡಬೇಕೆಂಬ ಉದ್ದೇಶವಿತ್ತು ಎಂದು ದೃಢಪಡಿಸಿದ ಅವರು, ಸಂಪುಟಕ್ಕೆ ಅರ್ಹತೆ ಇರುವವರಿಗೆ ಅವಕಾಶ ಸಿಗಬೇಕೆಂಬ ಒತ್ತಾಯವೂ ಇದೆ ಎಂದರು.

ನಾಯಕತ್ವ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿದ ಸಚಿವರು, ಅದು ಹೈಕಮಾಂಡ್ ತೀರ್ಮಾನಿಸುವ ವಿಷಯ. ಸಂಪುಟ ಪುನಾರಚನೆಗೂ ನಾಯಕತ್ವ ಬದಲಾವಣೆಗೂ ಯಾವುದೇ ಸಂಬಂಧವಿಲ್ಲ ಎಂದ ಅವರು, ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇಂತಹ ವಿಷಯಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಮುಖ್ಯಮಂತ್ರಿ ಜವಾಬ್ದಾರಿ ನೀಡಿದ್ದಾರೆ, ಪಕ್ಷದ ಚೌಕಟ್ಟಿನೊಳಗೆ ಹೈಕಮಾಂಡ್‌ಗೆ ಎಲ್ಲವನ್ನೂ ತಿಳಿಸುತ್ತೇನೆಂದು ಹೇಳಿದರು.

ಬಿಜೆಪಿ ವಿರೋಧ ಪಕ್ಷದ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಗರಿಗೆ ದ್ರಾಕ್ಷಿ ಹುಳಿ ಎಂಬ ರೀತಿ ಆಗಿದೆ. ಅಧಿಕಾರದ ಹಪಾಹಪಿ ಇದೆ, ಬೇರೆ ಜ್ಞಾನವಿಲ್ಲ. ಅಧಿಕಾರ ಇಲ್ಲದಿದ್ದರೆ ಚಡ ಪಡಿಸುತ್ತಾರೆ. ನಾವು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ, ಒಬ್ಬೊಬ್ಬರಿಗೆ ಒಂದೊಂದು ಅಭಿಪ್ರಾಯ ಇರುತ್ತದೆ. ಐದು ಬೆರಳು ಸಮನಾಗಿರುವುದಿಲ್ಲ. ಹೈಕಮಾಂಡ್ ಎಲ್ಲವನ್ನೂ ಗಮನಿಸಿ ತೀರ್ಮಾನ ಮಾಡುತ್ತಾರೆ ಎಂದರು.

## ಡಿ.8ರಿಂದ ಚಳಿಗಾಲದ ಅಧಿವೇಶನ ಆರಂಭ

**ಬೆಂಗಳೂರು:** ಚಳಿಗಾಲದ ಅಧಿವೇಶನ ಡಿಸೆಂಬರ್ 8 ರಿಂದ ಬೆಳಗಾವಿಯಲ್ಲಿ ನಡೆಯಲಿದೆ ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ತಿಳಿಸಿದರು.

ಶನಿವಾರ ಧಾರವಾಡದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಈ ಅಧಿವೇಶನದ ತಯಾರಿಗಾಗಿ ಮುಂದಿನ ವಾರ ಬೆಳಗಾವಿ ಜಿಲ್ಲಾಧಿಕಾರಿ ಜೊತೆ ಸಭೆ ನಡೆಸುತ್ತೇವೆ. ಮುಖ್ಯ ಮಂತ್ರಿ ಜೊತೆ ಚರ್ಚಿಸಿ ಅವರ ಸಮ್ಮತಿ ಪಡೆದಿದ್ದೇನೆಂದು ತಿಳಿಸಿದರು.

ಉತ್ತರ ಕರ್ನಾಟಕದ ಶಾಸಕರು ಅಭಿವೃದ್ಧಿ ವಿಚಾರದಲ್ಲಿ ಹಿಂದೆ ಬಿದ್ದಿದ್ದಾರೆ. ಅವರು ಗಂಭೀರವಾಗಿಲ್ಲ. ಅಭಿವೃದ್ಧಿ ಬಗ್ಗೆ ದಕ್ಷಿಣ ಕರ್ನಾಟಕದ ಶಾಸಕರು ಮಾತ್ರ ಮಾತನಾಡುತ್ತಾರೆ. ಈ ಕಾರಣಕ್ಕೆ ಉತ್ತರ ಕರ್ನಾಟಕದ ಸಮ್ಯಸ್ಯೆಗಳ ಬಗ್ಗೆ ಮಾತನಾಡಲು ತೀರ್ಮಾನ ಮಾಡಲಾಗಿದೆ ಎಂದು ಹೇಳಿದರು.

# ಉತ್ತರಾಧಿಕಾರಿ ವಿಚಾರಕ್ಕೆ ಮಹತ್ವ ನೀಡುವುದು ಬೇಡ

• ಪ್ರಜೋದಯ ವರದಿ

**ಹಾಸನ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ವಿಚಾರವಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಸಿದ್ದರಾಮಯ್ಯ ಅವರ ಹೇಳಿಕೆಗೆ ಮಹತ್ವ ನೀಡುವ ಅಗತ್ಯವಿಲ್ಲವೆಂದು ವೈದ್ಯಕೀಯ ಶಿಕ್ಷಣ ಸಚಿವ ಡಾ|| ಶರಣ ಪ್ರಕಾಶ್ ಪಾಟೀಲ್ ಅವರು ಹೇಳಿದರು.



ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, ಸೈದ್ಧಾಂತಿಕ ಹಿನ್ನಲೆಯಲ್ಲಿ ಯತೀಂದ್ರ ಅವರು ಆ ರೀತಿ ಹೇಳಿ ದ್ದಾರೆಂದು ಮುಖ್ಯಮಂತ್ರಿಯೇ ಹೇಳಿ ದ್ದಾರೆ. ಹಾಗಾಗಿ ಅದಕ್ಕೆ ಮಹತ್ವ ಕೊಡುವ ಅವಶ್ಯಕತೆ ಇಲ್ಲ. ಯಾವ ವಿಷಯ ಮಾತನಾಡಿದರೂ ಅದು ಸಾರ್ವಜನಿಕರಿಗೆ ಉಪ ಯೋಗ ವಾಗುವಂತಿರಬೇಕು. ಈ ರೀತಿಯ ಚರ್ಚೆಗಳಿಂದ ಯಾರಿಗೂ ಪ್ರಯೋಜನ ವಿಲ್ಲ. ಇಂತಹ ಸಂದರ್ಭದಲ್ಲಿ ಮಾಧ್ಯಮಗಳು ಜವಾಬ್ದಾರಿಯುತ ಪ್ರಶ್ನೆ ಗಳನ್ನು ಕೇಳಬೇಕು. ಜನರಿಗೆ ಅನುಕೂಲ ವಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ನಾವಾಡುವ ಮಾತು ಸಾರ್ವಜನಿಕ ಹಿತಾಸಕ್ತಿ ಯಿಂದ ಕೂಡಿರಬೇಕು. ಮಾಡುವ ಕೆಲಸ ಕೂಡ ಸಾರ್ವಜನಿಕ ಹಿತಾಸಕ್ತಿಯಿಂದ ಇರಬೇಕು. ರಾಜಕೀಯವಾಗಿ ಎಷ್ಟೇ ಏನೇ ಮಾತನಾಡಿದರೂ ಅದರಿಂದ ಜನರಿಗೆ ಪ್ರಯೋಜನವಿಲ್ಲ ವೆಂದರು.

ಉತ್ತರಾಧಿಕಾರಿ ವಿಚಾರ ಮುನ್ನಲೆಗೆ ಬಂದಿದ್ದು ಮಾಧ್ಯಮ ಗಳಿಂದಲೇ ಹೊರತು ಯಾರಾ ದರು ಒಬ್ಬ ಸಚಿವ, ಶಾಸಕರು ಸುದ್ದಿಗೋಷ್ಠಿ ಕರೆದು ಹೇಳಿಕೆ ಕೊಟ್ಟಿದ್ದಾರಾ ಎಂದು ಪ್ರಶ್ನಿಸಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಂಪುಟ ಪುನರ್ ರಚನೆ ಮುಖ್ಯಮಂತ್ರಿ ವಿವೇಚನೆಗೆ ಬಿಟ್ಟಿದ್ದಾಗಿರುತ್ತದೆ. ಮುಖ್ಯಮಂತ್ರಿ ವರಿಷ್ಠರ ಜೊತೆ ಅಂದರೆ ಎಐಸಿಸಿ ಅಧ್ಯಕ್ಷರು, ಮುಖಂಡರ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುತ್ತಾರೆಂದರು.

**ಡಿಸಿ ಹಾಡಿ ಹೊಗಳಿದ ಸಚಿವ**

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರನ್ನು ಸಚಿವ ಡಾ|| ಶರಣ ಪ್ರಕಾಶ್ ಪಾಟೀಲ್ ಹಾಡಿ ಹೊಗಳಿದರು. ಲತಾಕುಮಾರಿ ನಮ್ಮ ಕ್ಷೇತ್ರದಲ್ಲಿ ಉಪವಿಭಾಗಾಧಿಕಾರಿಯಾಗಿ ಸೇವೆ ಆರಂಭಿಸಿದರು. ಆ ಬಳಿಕ ನಮ್ಮ ಇಲಾಖೆಯಲ್ಲೇ ಒಂದೂವರೆ ವರ್ಷ ಕೆಲಸ ಮಾಡಿದ್ದಾರೆ. ಹಾಸನ ಜಿಲ್ಲಾಧಿಕಾರಿಯಾಗಿ ಅವರು ಬಂದಿರುವುದು ಖುಷಿ ತರಿಸಿದೆ. ಒಳ್ಳೆಯ ಅಧಿಕಾರಿಯ ಲಕ್ಷಣಗಳೇನೆಂದರೆ ಎಲ್ಲರ ಮಾತುಗಳನ್ನು ಬಹಳ ಸಮಾಧಾನದಿಂದ ಕೇಳುವುದಾಗಿದೆ. ಲತಾಕುಮಾರಿ ಆ ಗುಣಗಳನ್ನು ಹೊಂದಿದ್ದಾರೆ. ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡುತ್ತಾರೆಂದು ಮೆಚ್ಚುಗೆ ಸೂಚಿಸಿದರು.

## ಆಟೋ ಡಿಕ್ಕಿ: ವ್ಯಕ್ತಿ ಸಾವು

**ಹಾಸನ:** ಆಟೋ ಡಿಕ್ಕಿಯಾಗಿ ರಸ್ತೆ ಬದಿ ನಿಂತಿದ್ದ ವ್ಯಕ್ತಿ ಮೃತಪಟ್ಟಿರುವ ಘಟನೆ ನಗರದ ಬಿಟ್ಟಗೌಡನಹಳ್ಳಿಯ ನಂದಿನಿ ಪಾರ್ಲರ್ ಬಳಿ ನಡೆದಿದೆ.

ತಾಲ್ಲೂಕಿನ ಬಿದರಕೆರೆ ಗ್ರಾಮದ ನಾಗಣ್ಣ ಮೃತರು. ಅ.24 ರಂದು ಕೂಲಿ ಕೆಲಸ ಮುಗಿಸಿ ಕೊಂಡು ಊರಿಗೆ ಹೋಗಲು ಪ್ಯಾಸೆಂಜರ್ ಆಟೋಗಾಗಿ ಕಾದು ನಿಂತಿದ್ದಾಗ ಹನುಮಂತಪುರ ಕಡೆಯಿಂದ ವೇಗವಾಗಿ ಬಂದ ಆಟೋ ಚಾಲಕ ಡಿಕ್ಕಿ ಮಾಡಿದ್ದಾನೆ. ತಲೆ ಹಾಗು ಎದೆ ಭಾಗಕ್ಕೆ ಬಲವಾದ ಏಟು ಬಿದ್ದಿದ್ದರಿಂದ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕರ್ತವ್ಯ ಲೋಪ: ನೌಕರರ ಅಮಾನತು ಆದೇಶ ವಾಪಾಸ್

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಕರ್ತವ್ಯ ಲೋಪ ಆರೋಪದಡಿ ಅಮಾನತುಗೊಂಡಿದ್ದ ವಿವಿಧ ಇಲಾಖೆಯ ಒಂಬತ್ತು ನೌಕರರ ಅಮಾನತು ಆದೇಶವನ್ನು ವಾಪಾಸ್ ಪಡೆಯಲಾಗಿದೆ.

ರಾಜಸ್ವ ನಿರೀಕ್ಷಕಾರದ ಎಂ.ಎಸ್. ಗೋವಿಂದರಾಜು (ಕೆ.ಹೊಸಕೋಟೆ), ಯೋಗಾನಂದ (ಹೊಳೆನರಸೀಪುರ), ಸಂತೋಷ್ ಅಂಬಿಗರ್ (ಗ್ರಾಮ ಆಡಳಿತಾಧಿಕಾರಿ), ಶಿರಾಜ್ ಕುಮಾರ್ (ಗ್ರಾಮ ಆಡಳಿತ ಅಧಿಕಾರಿ) ಅವರ ಅಮಾನತು ಆದೇಶವನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿ ಲತಾಕುಮಾರಿ ಶುಕ್ರವಾರ ಆದೇಶಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯ ವಾರ್ಡನ್‌ಗಳಾದ ಆನಂದ್ ಮತ್ತು ರಮೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನ ಅಡುಗೆ ಸಹಾಯಕರಾದ ಆನಂದ ಹರಿಜನ, ಹೆಚ್.ಪ್ರಸಾದ್, ಮಧುಕುಮಾರ್ ಎಂಬುವವರನ್ನು ಅಮಾನತು ಮಾಡಲಾಗಿತ್ತು. ಸದ್ಯ ನಾಲ್ವರ ಸಸ್ಪೆಂಡ್ ಆದೇಶ ಹಿಂಪಡೆದಿದ್ದು ಉಳಿದ ಐವರ ಅಮಾನತು ರದ್ದು ಆದೇಶ ಸೋಮವಾರ ಹೊರಬೀಳಲಿದೆಯೆಂದು ಅಧಿಕಾರಿಗಳು ಹೇಳಿದ್ದಾರೆ.

**ಕಾರ್ಯದೊತ್ತಡದ ಸಮಜಾಯಿಷಿ**

ಗೋಲ್ಡನ್ ಪಾಸ್‌ಗಳ ಸ್ಕ್ಯಾನಿಂಗ್ ವಿಭಾಗದಲ್ಲಿ ನಿಯೋಜನೆಗೊಂಡಿದ್ದ ನಾಲ್ವರು ಕಂದಾಯ ಇಲಾಖೆ ನೌಕರರು ಸರಿಯಾಗಿ ಕರ್ತವ್ಯ ನಿರ್ವಹಿಸದ ಹಿನ್ನಲೆ ಗೋಲ್ಡನ್ ಪಾಸ್‌ಗಿಂತ ಹೆಚ್ಚು ಜನರು ಸರದಿ ಸಾಲಿನಲ್ಲಿ ತೆರಳಿದ್ದಾರೆಂಬ ಆರೋಪದಡಿ ನೌಕರ ರನ್ನು ಗುರಿಯಾಗಿಸಿ ಅಮಾನತು ಮಾಡಲಾಗಿತ್ತು. ಈ ಬಗ್ಗೆ ದೇವಾ ಲಯ ಆಡಳಿತಾಧಿಕಾರಿ ಹಾಗು ಉಪ ವಿಭಾಗಾಧಿಕಾರಿ ಮಾರುತಿ ಅವರು ಜಿಲ್ಲಾಧಿಕಾರಿಗೆ ಲಿಖಿತ ವರದಿ ಸಲ್ಲಿಸಿ ಅಧಿಕ ಕಾರ್ಯದೊತ್ತಡದಿಂದ ಲೋಪವಾಗಿದೆ. ಅದನ್ನು ಹೊರತು ಪಡಿಸಿದರೆ ಬೇರೆ ಯಾವ ಸಮಸ್ಯೆ ಯಾಗಿಲ್ಲ. ಅಮಾನತು ಆದೇಶ ರದ್ದು ಪಡಿಸ ಬೇಕೆಂದು ಪತ್ರ ಬರೆದಿದ್ದರು. ಸಮಾಜ ಕಲ್ಯಾಣ ಇಲಾಖೆಯ ಇಬ್ಬರು ವಾರ್ಡನ್‌ಗಳು ತಮಗೆ ನೀಡಿದ್ದ ಗುರುತಿನ ಚೀಟಿಯನ್ನು ಬೇರೆಯ ವರಿಗೆ ನೀಡಿ ಲೋಪ ಎಸಗಿದ್ದರು. ಅದೇ ರೀತಿ ಹಿಂದುಳಿದ ವರ್ಗ ಗಳ ಕಲ್ಯಾಣ ಇಲಾಖೆಯ ಮೂವರು ಅಡುಗೆ ಸಹಾಯಕರು ಮೇಲಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿದಾಗ ನಿಯೋಜಿತ ಸ್ಥಳದಲ್ಲಿ ಇರಲಿಲ್ಲ ಎಂಬ ಆರೋಪ ದಡಿ ಅಮಾನತಿಗೆ ಗುರಿಯಾಗಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಅಮಾನತು ಆದೇಶ ರದ್ದುಪಡಿಸಬೇಕೆಂದು ಸೂಚಿಸಿದ್ದರು. ಜೊತೆಗೆ ನೌಕರರು ಸಹ ತಮ್ಮ ತಪ್ಪೊಪ್ಪಿ ಕೊಂಡಿದ್ದರಿಂದ ಎಲ್ಲರನ್ನು ಸೇವೆ ಯಲ್ಲಿ ಮುಂದುವರಿಯುವಂತೆ ಕ್ರಮ ಕೈಗೊಳ್ಳಲಾಗಿದೆ.

## ಒಂದು ವಾರ ಮಳೆ ಮುನ್ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಇನ್ನೂ ಒಂದು ವಾರದ ಮಟ್ಟಿಗೆ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಜಿಲ್ಲೆಗಳ ಬಹುತೇಕ ಕಡೆ, ಉತ್ತರ ಒಳನಾಡು ಜಿಲ್ಲೆಗಳ ಕೆಲವು ಕಡೆ ಹಾಗು ದಕ್ಷಿಣ ಒಳನಾಡು ಜಿಲ್ಲೆಗಳ ಹಲವು ಕಡೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಬಂಗಾಳಕೊಲ್ಲಿ ಹಾಗು ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿ ತವಾಗಿದ್ದು, ಹವಾಮಾನದಲ್ಲಿ ಬದಲಾ ವಣೆ ಆಗಿದೆ ಹೀಗಾಗಿ ಅ.27 ರಂದು ಭಾರೀ ಮಳೆಯಾಗಲಿದೆ ಎಂದು ಹವಾ ಮಾನ ತಜ್ಞ ಬದರಿನಾಥ್ ಮಾಹಿತಿ ನೀಡಿದ್ದಾರೆ.

## ಬೆಂಕಿ ಹಚ್ಚಿದ್ದ ಆರೋಪಿ ಬಂಧನ

• ಪ್ರಜೋದಯ ವರದಿ



**ಸಕಲೇಶಪುರ:** ಪುರಸಭೆ ಮುಖ್ಯಾಧಿಕಾರಿ ಕಚೇರಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪಟ್ಟಣದ ಕುಶಾಲನಗರ ಬಡಾವಣೆ ನಿವಾಸಿ ನಿಂಗರಾಜು ಬಂಧಿತ ಆರೋಪಿ.

ಶುಕ್ರವಾರ ಸಂಜೆ ಪುರಸಭೆ ಕಚೇರಿಗೆ ನುಗ್ಗಿದ್ದ ಆರೋಪಿ, ಸಂಗ್ರಹವಾಗಿದ್ದ ಪ್ರಮುಖ ದಾಖಲೆಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ. ತಕ್ಷಣವೇ ಎಚ್ಚೆತ್ತ ಕಚೇರಿ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದು, ದೊಡ್ಡ ಅನಾಹುತ ತಪ್ಪಿಸಿದ್ದರು.

ಈ ಸಂಬಂಧ ಸಕಲೇಶಪುರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಗರ ಪೊಲೀಸ್ ಇನ್ಸ್‌ಪೆಕ್ಟರ್ ವಿ.ಸಿ.ವನರಾಜು ಅವರ ನೇತೃತ್ವದ ತಂಡವು ತ್ವರಿತ ತನಿಖೆ ನಡೆಸಿ, ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದೆ. ಘಟನೆಯ ಹಿಂದಿನ ನಿಖರ ಕಾರಣ ತಿಳಿದುಕೊಳ್ಳಲು ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

# ಕರ್ತವ್ಯದ ವೇಳೆ ಬೇರೆಡೆ ಹೋಗುವ ವೈದ್ಯರ ವಿರುದ್ಧ ಕ್ರಮ

## ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಆಸ್ಪತ್ರೆ ವೈದ್ಯರು ಕರ್ತವ್ಯದ ವೇಳೆಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ದೂರುಗಳು ಬಂದರೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ಹಿಮ್ಸ್ ನಿರ್ದೇಶಕರಿಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಆರ್. ಪಾಟೀಲ ಅವರು ಸೂಚಿಸಿದರು.

ಹಿಮ್ಸ್ ಸಭಾಂಗಣದಲ್ಲಿ ಶನಿವಾರ ನಡೆದ ಹಾಸನ ವೈದ್ಯಕಿಯ ವಿಜ್ಞಾನಗಳ ಸಂಸ್ಥೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ವೈದ್ಯರು ಬೆಳಿಗ್ಗೆಯಿಂದ ಸಂಜೆ 4ರ ವರೆಗೆ ಆಸ್ಪತ್ರೆಯಲ್ಲಿದ್ದು ಕರ್ತವ್ಯ ನಿರ್ವಹಿಸಬೇಕು. ಕರ್ತವ್ಯದ ವೇಳೆಯಲ್ಲಿ ಹೊರಗಡೆ ಕೆಲಸ ಮಾಡುವುದನ್ನು ತಡೆಯಬೇಕೆಂದು ಹೇಳಿದರು.

ಕಾಮಗಾರಿ ಪೂರ್ಣಗೊಂಡಿರುವ ಕಟ್ಟಡಗಳನ್ನು ಬಳಕೆ ಮಾಡಿಕೊಳ್ಳಲು ತಿಳಿಸಿದ ಸಚಿವರು ಬ್ಯಾಕ್‌ಲಾಗ್ ಹಾಗು 371ಜೆ ಅಡಿ ಅನುಮೋದನೆ ಖಾಲಿ ಇರುವ ಹುದ್ದೆಗಳನ್ನು ಅನುಮೋದನೆ ಪಡೆದು ಭರ್ತಿಗೆ ಕ್ರಮ ವಹಿಸಲು ಸೂಚಿಸಿರು. ಸೂಪರ್



ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯಕವಿರುವ ಹುದ್ದೆಗಳ ಭರ್ತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸುವಂತೆ ಸೂಚಿಸಿದ ಅವರು, ಬಳಕೆಗೆ ಬಾರದ ಆ್ಯಂಬುಲೆನ್ಸ್ ನಿಷ್ಕ್ರಿಯಗೊಳಿಸಿ ಸಿ.ಎಸ್.ಆರ್. ಅಡಿಯಲ್ಲಿ ಅಗತ್ಯವಿರುವ ಆ್ಯಂಬುಲೆನ್ಸ್ ಪಡೆದುಕೊಳ್ಳುವಂತೆ ಸಲಹೆ ನೀಡಿದರು. ಖಾಲಿ ಇರುವ ಹುದ್ದೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಂತೆ ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಎ.ಬಿ.ಆರ್.ಕೆ. ಯೋಜನೆಯಡಿ ಸೌಲಭ್ಯ ಪಡೆಯಲು ರೋಗಿಗಳ ಆಧಾರ್ ಕಾರ್ಡ್‌ನೊಂದಿಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ಇರುವುದಿಲ್ಲ ಓಟಿಪಿ ಪಡೆಯಬೇಕಿರುತ್ತದೆ. ಅದರಿಂದ ತೊಂದರೆಯಾಗುತ್ತಿದೆ ಈ ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿದರು.

ಭೋದನೆ ವಿಭಾಗಕ್ಕೆ 98 ಹೆಚ್ಚುವರಿ ಹುದ್ದೆ ನೇಮಕಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

» ನಾಲ್ಕನೇ ಪುಟದಲ್ಲಿ

**ಸಚಿವ ಶರಣ ಪ್ರಕಾಶ್ ಪಾಟೀಲ್ | ಪುಷ್ಪಗಿರಿ ಆರೋಗ್ಯ ಸಂಸ್ಥೆಗಳ ಉದ್ಘಾಟನಾ ಸಮಾರಂಭ**

# ರಾಜ್ಯದ ಪ್ರಗತಿಗೆ ಮಠ ಮಾನ್ಯಗಳ ಕೊಡುಗೆ ಅಪಾರ

• ಪ್ರಜೋದಯ ವರದಿ

**ಹಾಸನ:** ಮಠಗಳು ಅನ್ನ ದಾಸೋಹದ ಜೊತೆಗೆ ವಿದ್ಯಾ ದಾಸೋಹವನ್ನು ಮಾಡುತ್ತಿವೆ. ಆ ಮೂಲಕ ರಾಜ್ಯದ ಪ್ರಗತಿಗೆ ತಮ್ಮದೇಯಾದ ಕೊಡುಗೆ ನೀಡುತ್ತಿವೆಯೆಂದು ವೈದ್ಯಕೀಯ ಸಚಿವ ಡಾ|| ಶರಣ ಪ್ರಕಾಶ್ ಪಾಟೀಲ್ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಶನಿವಾರ ನಡೆದ ಶ್ರೀ ಪುಷ್ಪಗಿರಿ ಆರೋಗ್ಯ ವಿಜ್ಞಾನ ಸಂಸ್ಥೆಗಳ ಹಾಗು ಶ್ರೀ ಪುಷ್ಪಗಿರಿ ಇನ್ವಿನೆಕ್ಸ್ ಸಾಫ್ಟ್‌ವೇರ್ ಕಂಪನಿ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಧ್ಯಾತ್ಮ ಕ್ಷೇತ್ರ ಮಾತ್ರವಲ್ಲದೆ ಸಮಾಜಮುಖಿ ಕೆಲಸ ಮಾಡುತ್ತಾ ಜನರ ನಡುವೆ ಅನ್ಯೋನ್ಯತೆಯಿಂದ ಸಾಗುತ್ತಾ ಬಸವಾದಿ ಶರಣರ ನಿಜವಾದ ತತ್ವವನ್ನು ಸಾರುತ್ತಿವೆ ಎಂದರು.

ಪುಷ್ಪಗಿರಿ ಮಠದ ಸೋಮಶೇಖರ ಸ್ವಾಮೀಜಿ ಅವರು ಉತ್ತಮ ಕೆಲಸ ಮಾಡುತ್ತಿದ್ದು ಎಲ್ಲರ ಸಹಕಾರದೊಂದಿಗೆ ಕ್ಷೇತ್ರದ ಬೆಳವಣಿಗೆ ಹಾಗು ಸಮಾಜದ ಉದ್ಧಾರಕ್ಕಾಗಿ ಪ್ರಯತ್ನ ಮಾಡುತ್ತಿದ್ದಾರೆ. ಹಾಸನ ಉತ್ತಮ ಜಿಲ್ಲೆಯಾಗಿದ್ದು ಅಧಿಕಾರಿಗಳು ಜನಪ್ರತಿನಿಧಿಗಳು ಜನರ ಸೇವೆ ಮಾಡುವ ಉತ್ತಮ ಗುಣ ಹೊಂದಿದ್ದಾರೆ. ಮಠಗಳು ಸಹ ಜನರನ್ನು ಸನ್ಮಾರ್ಗದಲ್ಲಿ ಸಾಗುವಂತೆ ಪ್ರೇರಣೆ ಕೆಲಸ ಮಾಡುತ್ತಿದೆ. ಎಲ್ಲರನ್ನೂ ಪ್ರೀತಿಸುವ ಸನ್ಮಾರ್ಗದಲ್ಲಿ ಕೊಂಡೊಯ್ಯುವ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗಲಿದೆಯೆಂದರು.



ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ಪುಷ್ಪಗಿರಿ ಮಹಾಸಂಸ್ಥಾನ ಮಠದ ಒಂದೊಂದೆ ಹೆಜ್ಜೆ ಇಡುತ್ತಾ ಬೆಳೆಯುತ್ತಿದೆ. ಕಳೆದ 10 ವರ್ಷದಲ್ಲಿ 15 ವಿದ್ಯಾ ಸಂಸ್ಥೆಗಳನ್ನು ಕಟ್ಟಿದೆ. ಇದು ನನ್ನೊಬ್ಬನಿಂದ ಆಗಿರುವ ಸಾಧನೆಯಲ್ಲ. ಪ್ರತಿ ಸರ್ಕಾರದ ಸಚಿವರು, ಶಾಸಕರ, ಅಧಿಕಾರಿಗಳು ಸಾಧನೆಗೆ ಸಹಕಾರ ನೀಡಿದ್ದಾರೆಂದರು.

ಎನಗಿಂತ ಕಿರಿಯರಿಲ್ಲ ಶಿವ ಭಕ್ತರಿಗಿಂತ ಹಿರಿಯರಿಲ್ಲ ಎಂಬ ಬಸವಣ್ಣ ಅವರ ನುಡಿಯಂತೆ ಕೆಲಸ ಮಾಡುತ್ತಿದ್ದೇನೆ. ನಾವು ಭಿಕ್ಷುಕರು ಇದ್ದ ಹಾಗೆ. ಕುಳಿತಲ್ಲೇ ತಥಾಸ್ತು ಅಂದರೆ ಏನೂ ಆಗುವುದಿಲ್ಲ. ಎಲ್ಲರೂ ಕೈ ಜೋಡಿಸಿದಾಗ ಇಂತಹ ಕೆಲಸಗಳು ಆಗುತ್ತವೆಯೆಂದರು.

**ಹಣವಿಲ್ಲದೆ ಪರದಾಡಿದ್ದೆವು**

ಶ್ರೀ ಬಸವ ರಾಜೇಂದ್ರ ಸ್ವಾಮೀಜಿ ಅನಾರೋಗ್ಯಕ್ಕೆ ತುತ್ತಾದಾಗ ಹಣವಿಲ್ಲದೆ ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲು ಆಗಲಿಲ್ಲ. ನಂತರ ಅವರ ಆರಾಧನೆಗೂ ದುಡ್ಡಿಲ್ಲದೆ ಪರದಾಡುವಂತಾಯಿತು. ಅವರಿವರ ಬಳಿ ಹಣ ಸಂಗ್ರಹಿಸಿ ಕಾರ್ಯಕ್ರಮ ಮಾಡಿದ್ದೇವೆ. ಆದರೆ ಇಂದು ಆರೋಗ್ಯ ಸಂಸ್ಥೆಯನ್ನೇ ಕಟ್ಟುತ್ತಿರುವುದು ಹೆಮ್ಮೆಯ ವಿಷಯವೆಂದರು.

ಸುತ್ತೂರು, ಆದಿಚುಂಚನಗಿರಿ, ಸಿದ್ದಗಂಗಾ ಸಂಸ್ಥೆಗಳು ಲಕ್ಷಾಂತರ ಭಕ್ತರಿಗೆ ದಾರಿಯಾಗಿದೆ. ದೊಡ್ಡ ದೊಡ್ಡ ಸಂಸ್ಥೆಗಳು ಗುರುತಿಸಿಕೊಂಡಿವೆ. ಸದ್ಯ ಏಳು ಕೋರ್ಸ್ ಪ್ರಾರಂಭವಾಗಿದೆ. ಸರ್ಕಾರದಿಂದ ನರ್ಸಿಂಗ್ ಕಾಲೇಜಿಗೆ ಅನುಮತಿ ಸಿಕ್ಕರೆ ಮುಂದಿನ ವರ್ಷದಿಂದ ಅದನ್ನೂ ಪ್ರಾರಂಭಿಸುತ್ತೇವೆಂದರು.

ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಸಮಾಜಕ್ಕೆ ಆಹಾರ, ಶಿಕ್ಷಣ, ಆರೋಗ್ಯ ಮನುಷ್ಯನಿಗೆ ಮುಖ್ಯ. ಈ ಮೂರು ಕ್ಷೇತ್ರಗಳಲ್ಲಿ ಸೋಮಶೇಖರ ಸ್ವಾಮೀಜಿ ಗುರುತರ ಸಾಧನೆ ಮಾಡಿದ್ದಾರೆ. ಮಠದ ಜವಾಬ್ದಾರಿ ವಹಿಸಿಕೊಂಡ ದಿನದಿಂದಲೂ ಏಳಿಗೆಗಾಗಿ ಕೆಲಸ ಮಾಡುತ್ತಿದ್ದಾರೆ. ಮಠ ಮಾನ್ಯ ಮಾತ್ರವಲ್ಲದೆ ಕೃಷಿ, ಶಿಕ್ಷಣದ ಮೂಲಕ ಗಮನ ಸೆಳೆದಿದ್ದಾರೆ. ಈಗ ಆರೋಗ್ಯ ಕ್ಷೇತ್ರಕ್ಕೆ

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ಭಾವ ಲಹರಿ

## ಚಹಾ - ಭಾರತೀಯರ ಮನಗೆದ್ದ ಮಸಾಲೆಭರಿತ ಪಾನೀಯ

ಭಾರತದ ಬಹುಪಾಲು ಮನೆಗಳಲ್ಲಿ ಮನೆಯವರೆಲ್ಲರ ಮನಗೆದ್ದ ಪಾನೀಯ ಚಹಾ. ಸಸ್ಯದ ಎಳೆ ಎಲೆಗಳನ್ನು ನಾಜೂಕಾಗಿ ಸಂಸ್ಕರಿಸಿ ಉತ್ಪಾದಿಸುವ ಚಹಾ ಹುಡಿಯಿಂದ ತಯಾರಿಸುವ ಪಾನೀಯ ಇದು. ಈಗ ನಮ್ಮ ದೇಶ ಉತ್ಪಾದಿಸುವ ಚಹಾ ಹುಡಿಯ ಪರಿಮಾಣ ಎಷ್ಟು? ವರುಷಕ್ಕೆ 9 ಲಕ್ಷ ಟನ್! ಆದರೆ, ಈ ಸಸ್ಯದ ಮೂಲ ಭಾರತ ಅಲ್ಲ.


ಚಹಾಕ್ಕಿಂತ ಮುಂಚೆ ಭಾರತದಲ್ಲಿ ಬಳಕೆಯಲ್ಲಿದ್ದ ಚೇತೋಹಾರಿ ಪಾನೀಯ ಕಾಫಿ. ಹದಿನಾರನೆಯ ಶತಮಾನದಲ್ಲಿ ಭಾರತಕ್ಕೆ ತರಲಾದ ಕಾಫಿ, ನಾಲ್ಕು ಶತಮಾನಗಳ ಕಾಲ ಜನಪ್ರಿಯ ಪಾನೀಯವಾಗಿ ಮುಂದುವರಿಯಿತು. ಅನಂತರ, ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬ್ರಿಟಿಷರು ಚೇತೋಹಾರಿ ಪಾನೀಯವಾಗಿ ಚಹಾವನ್ನು ಭಾರತದಲ್ಲಿ ಪ್ರಚುರಪಡಿಸಿದರು. (ಅದಕ್ಕಿಂತ ಮುಂಚೆ, ಅಸ್ಸಾಮಿನ ಕೆಲವು ಬುಡಕಟ್ಟಿನ ಜನರು ಚಹಾ ಸೇವಿಸುತ್ತಿದ್ದ ದಾಖಲೆಗಳಿವೆ.)

ಡಾಕ್ಟರ್ ಕ್ಯಾಂಪ್‌ಬೆಲ್ ಎಂಬ ಸರಕಾರಿ ಸರ್ಜನ್ ವರ್ಗಾವಣೆಯಾಗಿ 1841ರಲ್ಲಿ ಕಾಠ್ಮಂಡುವಿನಿಂದ ಡಾರ್ಜಿಲಿಂಗಿಗೆ ಬಂದ. ಕಳ್ಳಸಾಗಣೆ ಮೂಲಕ ಚೀನಾದಿಂದ ಚಹಾ ಬೀಜಗಳನ್ನು ತರಿಸಲು ಆತ ಗುಪ್ತ ಯೋಜನೆ ರೂಪಿಸಿ, ಅಂತೂ ಕೆಲವು ಬೀಜಗಳನ್ನು ಕದ್ದು ತರಿಸಿದ. ಅವನ್ನು ಡಾರ್ಜಿಲಿಂಗಿನ ಬೆಟ್ಟಗಳಲ್ಲಿ ಬೆಳೆಸಿದ. ಹೀಗೆ ಚಹಾ ಉತ್ಪಾದನೆಯಲ್ಲಿ ಚೀನಾದ ಏಕಸ್ವಾಮಿತ್ವವನ್ನು ತೊಡೆದು ಹಾಕಲಿಕ್ಕಾಗಿ ಬ್ರಿಟಿಷರು ಹೂಡಿದ ತಂತ್ರ ಕೊನೆಗೂ ಯಶಸ್ವಿಯಾಯಿತು.

ಬ್ರಿಟಿಷರು ಭಾರತದಲ್ಲಿ ತಮಿಳ್ನಾಡು, ಅಸ್ಸಾಮ್ ಮತ್ತು ಇತರೆಡೆಗಳಲ್ಲಿ ಚಹಾ ತೋಟಗಳನ್ನು ಬೆಳೆಸಿದರು. ಆದರೆ, ಆ ಪ್ರದೇಶಗಳ ಸಮುದಾಯಗಳು ಚಹಾವನ್ನು ಪಾನೀಯವಾಗಿ ಸ್ವೀಕರಿಸಲಿಲ್ಲ. ಇದು, ಬ್ರಿಟಿಷ್ ಮಹಿಳೆಯರ ಮೆಚ್ಚಿನ ಪಾನೀಯವಾಗಿತ್ತು. ಪ್ರತಿ ದಿನ ಸಂಜೆ, ಚಹಾ ಕೂಟಗಳನ್ನು ಏರ್ಪಡಿಸುವುದು ಅವರ ಖಯಾಲಿಯಾಗಿತ್ತು. ಆದರೆ, 1930ರ ಆರ್ಥಿಕ ಕುಸಿತದಿಂದಾಗಿ, ಬಹುಪಾಲು ಬ್ರಿಟಿಷ್ ಕುಟುಂಬಗಳಿಗೆ ಚಹಾಹುಡಿ ಖರೀದಿ ಮುಂದುವರಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ, ಬ್ರಿಟಿಷರಿಗೆ ಶೇಖರಿಸಿಟ್ಟ ಚಹಾಹುಡಿಯ ದಾಸ್ತಾನನ್ನು ವಿಲೇವಾರಿ ಮಾಡಬೇಕಾದ ಅನಿವಾರ್ಯತೆ ಉಂಟಾಯಿತು. ಆದ್ದರಿಂದ ಬ್ರಿಟಿಷರು ಭಾರತದ ಮಾರುಕಟ್ಟೆಗೆ ಚಹಾಹುಡಿ ಬಿಡುಗಡೆ ಮಾಡಬೇಕಾಯಿತು.

ಬ್ರಿಟಿಷರು ತಯಾರಿಸುತ್ತಿದ್ದ ಚಹಾದ ಬಣ್ಣ ನಸುಗಪ್ಪು. ಅದು ಭಾರತೀಯರಿಗೆ ಇಷ್ಟವಾಗಲೇ ಇಲ್ಲ. ಆದ್ದರಿಂದ ಭಾರತೀಯರು ಚಹಾ ಪಾನೀಯಕ್ಕೆ ಹಾಲಿನ ಜೊತೆಗೆ ಶುಂಠಿ, ಏಲಕ್ಕಿ ಇತ್ಯಾದಿ ಮಸಾಲೆಗಳನ್ನು ಸೇರಿಸತೊಡಗಿದರು. ಹಾಗೆ ನಮ್ಮ ದೇಶದಲ್ಲಿ ಬಳಕೆಗೆ ಬಂತು ಮಸಾಲೆ ಚಹಾ.





ಈಗ ಹಲವು ಮನೆಗಳಲ್ಲಿ ಚಹಾ ಕುದಿಸುವಾಗ ತಮಗೆ ಬೇಕಾದ ರುಚಿ ನೀಡಲಿಕ್ಕಾಗಿ ಒಂದೆರಡು ಮಸಾಲೆ ಸೇರಿಸುತ್ತಾರೆ: ಶುಂಠಿ, ಏಲಕ್ಕಿ, ಕರಿಮೆಣಸು, ದಾಲ್ಚಿನ್ನಿ ಚಕ್ಕೆ, ಅಥವಾ ಮಜ್ಜಿಗೆಸೊಪ್ಪು. ಆದ್ದರಿಂದಲೇ, ಒಂದು ಮನೆಯ ಚಹಾದ ರುಚಿ ಇನ್ನೊಂದು ಮನೆಯ ಚಹಾದ ರುಚಿಯಂತೆ ಇರೋದಿಲ್ಲ ಎಂಬ ಮಾತು ಬಳಕೆಯಲ್ಲಿದೆ. ಇನ್ನು ಕೆಲವು ಮನೆಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಚಹಾದ ಮಸಾಲೆ ಮಿಶ್ರಣ ತಂದು, ಚಹಾ ತಯಾರಿಸುವಾಗ ಅದನ್ನು ಸೇರಿಸುತ್ತಾರೆ. ಕುದಿಯುವ ಚಹಾಹುಡಿಯ ನೀರಿಗೆ ನಿಂಬೆರಸ ಬೆರೆಸಿದ ಹಸುರು ಚಹಾ ಕೂಡ ಭಾರತದಲ್ಲಿ ಜನಪ್ರಿಯ.

ಭಾರತದ ಜನಪ್ರಿಯ ಚಹಾ ಬ್ರಾಂಡ್‌ಗಳಲ್ಲೊಂದಾದ ಬ್ರೂಕ್ ಬಾಂಡ್ ರೆಡ್ ಲೇಬಲ್ ಜೂನ್ 2022ರಲ್ಲಿ ರೆಡ್ ಲೇಬಲ್ ನ್ಯಾಚುರಲ್ ಕೇರ್ ಎಂಬ ಚಹಾ ಹುಡಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿತು. ಇದರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವ ಐದು ಆಯುರ್ವೇದ ಅಂಶಗಳಿವೆ ಎಂಬುದು ಕಂಪೆನಿಯ ಘೋಷಣೆ: ಏಲಕ್ಕಿ, ಶುಂಠಿ, ಮುಲೆಥಿ, ಅಶ್ವಗಂಧ ಮತ್ತು ತುಳಸಿ. ರೆಡ್ ಲೇಬಲ್ ಚಹಾ ಹುಡಿಯ 100 ಗ್ರಾಮ್ ಪ್ಯಾಕೆಟಿನ ಬೆಲೆ ರೂ.50 ಆಗಿದ್ದರೆ, ಈ ಹೊಸ ಚಹಾ ಹುಡಿಯ 100 ಗ್ರಾಮ್ ಪ್ಯಾಕೆಟಿನ ಬೆಲೆ ರೂ.55. ಅದಲ್ಲದೆ, ಆರಂಭದಲ್ಲಿ ರೆಡ್ ಲೇಬಲ್ ಚಹಾ ಹುಡಿಯ 250 ಗ್ರಾಮ್ ಪ್ಯಾಕೆಟಿನ ಜೊತೆಗೆ 40 ಗ್ರಾಮ್ ಹೊಸ ಚಹಾ ಹುಡಿ ಕೊಡುಗೆ ನೀಡಲಾಗಿತ್ತು. ಹೇಗಿದೆ ನೋಡಿ, ಚಹಾ ಹುಡಿಯ ಮಾರಾಟ ತಂತ್ರ!


ಈಗ ಚಹಾ ತೋಟಗಳು ನೀಲಗಿರಿ ಮತ್ತು ಚಿಕ್ಕಮಗಳೂರಿನ ಬೆಟ್ಟಗಳಲ್ಲೂ ಇವೆ. ಆದರೆ ಡಾರ್ಜಿಲಿಂಗ್ ಚಹಾದ ವಿಶೇಷ ಕಂಪು ಬೇರೆ ಯಾವುದೇ ಸ್ಥಳದಲ್ಲಿ ಬೆಳೆಯುವ ಚಹಾಕ್ಕೆ ಇಲ್ಲ. ಆದ್ದರಿಂದಲೇ ಮಿತವಾದ ಪರಿಮಾಣದಲ್ಲಿ ಉತ್ಪಾದನೆಯಾಗುವ ಡಾರ್ಜಿಲಿಂಗ್ ಚಹಾ ಜಾಗತಿಕ ಮಾರುಕಟ್ಟೆಯಲ್ಲಿ ಭಾರೀ ಬೆಲೆಗೆ ಮಾರಾಟವಾಗುತ್ತದೆ - ಕಿಲೋಗ್ರಾಮಿಗೆ ರೂಪಾಯಿ ಒಂದು ಲಕ್ಷಕ್ಕಿಂತ ಜಾಸ್ತಿ ಬೆಲೆಗೆ. ಅಲ್ಲಿನ ಚಹಾದ ವಾರ್ಷಿಕ ಉತ್ಪಾದನೆ ಸುಮಾರು 10,000 ಟನ್. ಸ್ಥಳೀಯ ಬೇಡಿಕೆ ಪೂರೈಸಿ ರಫ್ತಾಗುವುದು ಕೇವಲ 6,000 ಟನ್. ಆದರೆ, ಡಾರ್ಜಿಲಿಂಗ್ ಚಹಾದ ಹೆಸರಿನಲ್ಲಿ ಜಗತ್ತಿನಲ್ಲಿ ಮಾರಾಟವಾಗುವ ಚಹಾದ ಒಟ್ಟು ಪರಿಮಾಣ 40,000 ಟನ್!

ಈ ಅವಾಂತರವನ್ನು ತಡೆಯಲಿಕ್ಕಾಗಿ, ಭಾರತದ ಚಹಾ ಮಂಡಲಿ ಡಾರ್ಜಿಲಿಂಗ್ ಚಹಾಕ್ಕೆ ಭೌಗೋಳಿಕ ಸೂಚಕ (ಜಿ.ಐ.) ಛಾಪು ಪಡೆಯಿತು. ಈ ಛಾಪು ಪಡೆದ ಭಾರತದ ಮೊತ್ತಮೊದಲ ಕೃಷಿ ಉತ್ಪನ್ನ ಡಾರ್ಜಿಲಿಂಗ್ ಚಹಾ. ಇದರಿಂದಾಗಿ, ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ನಾಲ್ಕು ಸಬ್-ಡಿವಿಜನಿನ (ಸದಾರ್, ಕಾಲಿಮ್‌ಪೋಂಗ್, ಕುರ್ಸಿಯೋಂಗ್ ಮತ್ತು ಸಿಲಿಗುರಿ) ಬೆಟ್ಟಗಳಲ್ಲಿರುವ 87 ಚಹಾ ಎಸ್ಟೇಟುಗಳಲ್ಲಿ ಬೆಳೆಯುವ ಚಹಾಕ್ಕೆ ಮಾತ್ರ ಡಾರ್ಜಿಲಿಂಗ್ ಚಹಾ ಎಂಬ ಲೇಬಲ್ ನೀಡಿ, ಮಾರಾಟ ಮಾಡುವುದು ಕಾನೂನುಸಮ್ಮತ. ಇನ್ನಾದರೂ ಡಾರ್ಜಿಲಿಂಗ್ ಚಹಾ ಎಂಬ ಹೆಸರಿನ ದುರುಪಯೋಗಕ್ಕೆ ಕಡಿವಾಣ ಬೀಳುತ್ತದೆ ಎಂದು ನಿರೀಕ್ಷಿಸೋಣ.

ಹಲವು ಹಿಂದಿ ಚಲನಚಿತ್ರಗಳಲ್ಲಿ ಚಹಾ ಸೇವನೆಯ ದೃಶ್ಯಗಳಿವೆ. ಚಹಾ ಸೇವನೆಗೆ ಸಂಬಂಧಿಸಿದ ಕೆಲವು ಹಿಂದಿ ಚಲನಚಿತ್ರ ಹಾಡುಗಳು ಜನಪ್ರಿಯವಾಗಿವೆ. ಉದಾಹರಣೆಗೆ, 90ರ ದಶಕದಲ್ಲಿ ಲಕ್ಷಗಟ್ಟಲೆ ಜನರು ಗುಣುಗುಣಿಸಿದ ಬಾಲಿವುಡ್ ಹಾಡು: ಏಕ್ ಗರಮ್ ಚಾಯ್ ಕಿ ಪಿಯಾಲಿ ಹೊ, ಕೊಯಿ ಉಸ್ಕೊ ಪಿಲಾನೆ ವಾಲಿ ಹೊ. ಇದನ್ನು ಯೂ-ಟ್ಯೂಬಿನಲ್ಲಿ ವೀಕ್ಷಿಸಿದವರ ಸಂಖ್ಯೆ ಸುಮಾರು 60 ಲಕ್ಷ!

## ಕನ್ನಡ ಕವನಗಳು ★★★★★★

### ದೇವರೂ ಹೊರತಲ್ಲ !



ಕುಂಬಳಕಾಯಿ ಕದ್ದದ್ದು ಯಾರು
ಎಂದು ಪ್ರಶ್ನಿಸಿದರೆ
ಕಳ್ಳರು ಹೆಗಲು ಮುಟ್ಟಿ
ನೋಡಿಕೊಳ್ಳುತ್ತಾರೆ!
ಕೆಲವು ವಿಷಯಗಳನ್ನು
ಹೇಳಿದಾಗ
ಸಂಬಂಧಪಟ್ಟವರು
ತನಗೇ ಹೇಳಿದ್ದು ಅಂತ
ತಿಳಿಯುತ್ತಾರೆ!
ಭಕ್ತಿಯಿಂದ ಪ್ರಾರ್ಥಿಸಿದಾಗ
ತನ್ನನ್ನೇ ಪ್ರಾರ್ಥಿಸಿದ್ದು ಅಂತ
ಸಂಬಂಧಪಟ್ಟ ದೇವರೂ ತಿಳಿದು
ಒಲಿಯುತ್ತಾರೆ!

★★★

ಶಕ್ತಿ-ಭಕ್ತಿ-ಮುಕ್ತಿ!
ಶಕ್ತಿ
ನಮಗೋಸ್ಕರವೇ ಹೊರತು
ನೋಡುವವರಿಗೋಸ್ಕರವಲ್ಲ!
ಶಕ್ತಿ ಮೈನೆರೆಯಬೇಕು!
ಭಕ್ತಿ
ನಮಗೋಸ್ಕರವೇ ಹೊರತು
ನೋಡುವವರಿಗೋಸ್ಕರವಲ್ಲ
ಭಕ್ತಿಯಿಂದ ಮೈ ಮರೆಯಬೇಕು !
ಮುಕ್ತಿ
ನಮಗೋಸ್ಕರವೇ ಹೊರತು
ನೋಡುವವರಿಗೋಸ್ಕರವಲ್ಲ
ಮುಕ್ತಿ ಸಾಧನೆಯಲ್ಲಿ
ಮೈತೊರೆಯಬೇಕು !

**- ಮೌನಮುಖಿ**

## ಬೆಳಕು ಬೀರುವ ಸರಸ್ವತಿ ಚೇಳು!

**■ ಜಗತ್ತಿನಾದ್ಯಂತ ಆ ರೀತಿಯ ಹಲವು ಕೀಟಗಳು ಇವೆ, ಹೆಚ್ಚಿನ ವಿವರ ಬೇಕಿದ್ದರೆ ನನ್ನ ಗೆಳೆಯರನ್ನು ಕೇಳಿ ತಿಳಿಸುತ್ತೇನೆ ಎಂದನಾತ. ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದ ಮನೆಯಲ್ಲಿ ವರ್ಷಗಟ್ಟಲೆ ವಾಸಿಸಿದವರಿಗೆ ಮಾತ್ರ ಪರಿಚಯವಿರಬಹುದಾದ ಒಂದು ಪುಟ್ಟ ಜೀವಿ ಅದು. ಅದನ್ನು ನಮ್ಮ ಹಳ್ಳಿಯಲ್ಲಿ ಸರಸ್ವತಿ ಚೇಳು ಎನ್ನುತ್ತಾರೆ!**

ಸರಸ್ವತಿ ಚೇಳಿನ ನಾಜೂಕಾದ ಪುಟಾಣಿ ಗಾತ್ರವಂತೂ ವಿಸ್ಮಯ ಹುಟ್ಟಿಸುವಂಥದ್ದು. ಬೇರೆ ಬೇರೆ ಸಂದರ್ಭಗಳಲ್ಲಿ ಆಗಾಗ ಮನೆಯೊಳಗೆ ಬರುವ ಅವು, ಅಂದಾಜು ಒಂದು ಇಂಚಿನಿಂದ ಎರಡು- ಎರಡೂವರೆ ಇಂಚು ಉದ್ದವಿದ್ದುದನ್ನು ಕಂಡಿದ್ದೆ.

ಇದೊಂದು ಪುಟಾಣಿ ಜೀವಿಯ ಕುರಿತು ಹಿಂದೊಮ್ಮೆ ನಾನು ಬರೆದದ್ದುಂಟು. ಇತ್ತೀಚೆಗೆ ಅದೇ ಜೀವಿಯನ್ನು ಮತ್ತೊಮ್ಮೆ ನೆನಪಿಸಿಕೊಂಡೆ. ಪ್ರಾಣಿಶಾಸ್ತ್ರವನ್ನು ಪಠ್ಯವಾಗಿ ಓದಿರುವ ನನ್ನ ಸಹಪಾಠಿ ಯೊಬ್ಬನಿಗೆ ಫೋನಾಯಿಸಿ, ಅದರ ಕುರಿತು ಕೇಳಿದೆ: ಈ ರೀತಿ ಒಂದು ಜೀವಿ ಇದೆ, ಅದರ ಮೈ ಮೇಲೆ ಬೆಳಕಿನ ಗೆರೆಗಳು ಮೂಡುತ್ತವೆ. ಅದರ ಹೆಸರೇನು ಗೊತ್ತೇ?. ಅವನು ಪ್ರಾಣಿಶಾಸ್ತ್ರವನ್ನು ಓದಿದ್ದರೂ, ಅದಕ್ಕೆ ಸಂಬಂಧವೇಪಡದ ಸರಕಾರದ ಇಲಾಖೆಯೊಂದರಲ್ಲಿ ಬೇರಾವುದೋ ಕೆಲಸದಲ್ಲಿ ಸೇರಿಕೊಂಡಿದ್ದ.

ಆ ಜೀವಿಯ ವರ್ಗ, ಕುಟುಂಬ, ವೈಜ್ಞಾನಿಕ ನಾಮಧೇಯ ತಿಳಿಸು, ವಿವರ ಹುಡುಕಿ ಕೊಡುತ್ತೇನೆ ಎಂದನಾತ. ಅದೇ ಮಾರಾಯ ನನಗೆ ಬೇಕಾಗಿದ್ದುದು, ನಾನು ಅದನ್ನು ಕಂಡಿದ್ದೇನೆ, ಆದರೆ ಅದರ ಜೀವನಕ್ರಮ ತಿಳಿದಿಲ್ಲ, ನಿನಗೆ ಗೊತ್ತಾ? ಎಂದು ಮತ್ತೊಮ್ಮೆ ಕೇಳಿದೆ. ಆ ಜೀವಿಯ ವಿವರವನ್ನೂ ಹೇಳಿದೆ.


ಜಗತ್ತಿನಾದ್ಯಂತ ಆ ರೀತಿಯ ಹಲವು ಕೀಟಗಳು ಇವೆ, ಹೆಚ್ಚಿನ ವಿವರ ಬೇಕಿದ್ದರೆ ನನ್ನ ಗೆಳೆಯರನ್ನು ಕೇಳಿ ತಿಳಿಸುತ್ತೇನೆ ಎಂದನಾತ. ವಿದ್ಯುತ್ ದೀಪದ ವ್ಯವಸ್ಥೆ ಇಲ್ಲದ ಮನೆಯಲ್ಲಿ ವರ್ಷಗಟ್ಟಲೆ ವಾಸಿಸಿದವರಿಗೆ ಮಾತ್ರ ಪರಿಚಯವಿರಬಹುದಾದ ಒಂದು ಪುಟ್ಟ ಜೀವಿ ಅದು. ಅದನ್ನು ನಮ್ಮ ಹಳ್ಳಿಯಲ್ಲಿ ಸರಸ್ವತಿ ಚೇಳು ಎನ್ನುತ್ತಾರೆ!

ವಿದ್ಯುತ್ ಬೆಳಕಿಗೂ, ಈ ಜೀವಿಯು ಗೋಚರವಾಗುವುದಕ್ಕೂ ಅದೇಕೆ ವಿರುದ್ಧ ಸಂಬಂಧವೆಂದು ನಿಮಗೆ ಕುತೂಹಲವೆ? ಹಾಗಿದ್ದರೆ, 1970ರ ದಶಕದಿಂದ ನನ್ನ ಕಥನ ಆರಂಭಿಸುವೆ. ನಸುಗತ್ತಲಿನ ಹೊತ್ತು. ಶಾಲೆಯಿಂದ ವಾಪಸಾದ ನಾವು ಮಕ್ಕಳು, ಪುಸ್ತಕಗಳನ್ನು ನೆಲದ ಮೇಲೆ ಹಾಸಿದ ಚಾಪೆಯ ಮೇಲೆ ಹರಡಿಕೊಂಡು, ಚೂರು ಪಾರು ಬರೆಯುವುದೋ, ಓದುವುದೋ ಮಾಡುತ್ತಾ ಕುಳಿತಿದ್ದೆವು.

ಅಂದು ನಮ್ಮ ಓದಿಗೆ ಬೆಳಕು ನೀಡುತ್ತಿದ್ದುದು ಒಂದು ಚಿಮಿಣಿ ಎಣ್ಣೆಯ ಬುಡ್ಡಿ ದೀಪ. ಸಾಕಷ್ಟು ದುರ್ಲಭವೆಂದೇ ಪರಿಗಣಿಸಲ್ಪಟ್ಟ, ನ್ಯಾಯ ಬೆಲೆ ಅಂಗಡಿಗಳಲ್ಲಿ ಮಾತ್ರ ಲಭ್ಯವಾಗಿದ್ದ, ಪಡಿತರ ಚೀಟಿಯಲ್ಲಿ ನಮೂದಾಗಿ, ತಿಂಗಳಿಗೆ ಒಂದೋ ಎರಡೋ ಬಾಟಲಿ (ಬಿಯರ್ ಬಾಟಲಿ ಗಾತ್ರ!) ದೊರಕುತ್ತಿದ್ದ ಚಿಮಿಣಿ ಎಣ್ಣೆಯನ್ನು ಜತನದಿಂದ ಉಪಯೋಗಿಸುವಂತೆ, ಮನೆಯ ಹಿರಿಯರು ತಾಕೀತು ಮಾಡುತ್ತಿದ್ದರು.

ವಿದ್ಯುತ್ ದೀಪದ ಸಂಪರ್ಕ ನಮ್ಮ ಮನೆಗೆ ಇನ್ನೂ ಬಂದಿರಲಿಲ್ಲ. ಸುತ್ತಲೂ ಗದ್ದೆ ಬಯಲು ಇದ್ದುದರಿಂದ, ತಂತಿ ಎಳೆಯುವುದು ಕಷ್ಟ ಎಂದು ಸರಕಾರದ ಸಬೂಬು. ಪುಸುಪುಸು ಹೊಗೆ ಬಿಡುತ್ತಿದ್ದ ಬುಡ್ಡಿ ದೀಪದ ಪಕ್ಕದಲ್ಲೇ ಕುಳಿತು, ಆ ಹೊಗೆಯು ನಮ್ಮ ಮುಖದತ್ತ ತೇಲಿ ಬರುತ್ತಿದ್ದರೂ, ತುಸು ಅತ್ತಿತ್ತ ಜರುಗಿ ಕುಳಿತು, ನಾನು ಮತ್ತು ನನ್ನ ತಂಗಿಯರು ಆ ರಾತ್ರಿಯ ಅಧ್ಯಯನದಲ್ಲಿ ಮಗ್ನರಾಗುವುದು ದಿನನಿತ್ಯದ ಪದ್ಧತಿ. ಇಲ್ಲವಾದರೆ, ನಮ್ಮ ಅಮ್ಮಮ್ಮ ಬಿಡುತ್ತಿರಲಿಲ್ಲವಲ್ಲ!

ಅಬ್ಬಬ್ಬಾ ಅಂದರೆ, ಅರ್ಧ ಗಂಟೆಯಿಂದ ಒಂದು ಗಂಟೆಯೊಳಗೆ ನಮ್ಮ ಓದು ಮುಗಿಯುತ್ತಿತ್ತು ಅನ್ನಿ. ಮಕ್ಕಳೇ, ಎದ್ದು ಈಚೆಗೆ ಬನ್ನಿ, ಈ ಬದಿಗೆ... ಎನ್ನುತ್ತಾ ತುಸು ಗಾಬರಿಯಿಂದ, ಒಂದು ತೆಂಗಿನ ಕಡ್ಡಿ ಪೊರಕೆ ಹಿಡಿದು ಅಮ್ಮಮ್ಮ ಗಡಿಯಿಡಿಯಿಂದ ನಮ್ಮತ್ತ ಬಂದರು ಅಂದರೆ, ಆ ಕಗ್ಗತ್ತಲ ರಾತ್ರಿಯಲ್ಲಿ ಯಾವುದೋ ಮರಕಪ್ಪೆಯೋ, ಸಂದಿಪದಿಯೋ ಮನೆಯೊಳಗೆ ಬಂದಿದೆ ಎಂದರ್ಥ. ಓದುತ್ತಿದ್ದ ನಮಗೆ ಅದು ಒಂದು ಒಳ್ಳೆಯ ನೆಪ! ಓದು ತಪ್ಪಿಸಿ ಕೊಳ್ಳುವ ನೆಪ! ಪುಸ್ತಕಗಳನ್ನು ನೆಲದ ಮೇಲೆ ಹಾಗೆಯೇ ಬಿಟ್ಟು ನಾವು ಎದ್ದು ಓಡುವುಷ್ಟರಲ್ಲಿ, ಅಮ್ಮಮ್ಮ ತನ್ನ ಕೈಲಿದ್ದ ಕಡ್ಡಿ ಪರಕೆಯನ್ನು ಮೆಲ್ಲಗೆ, ಸದ್ದಾಗುವಂತೆ ಗೋಡೆಯ ಬುಡಕ್ಕೆ ಬಡಿದೇ ಬಿಡುತ್ತಿದ್ದರು.



ನಮಗೆಲ್ಲಾ ಕುತೂಹಲ! ರಾತ್ರಿ ಹೊತ್ತು ಮನೆಯೊಳಗೆ ಬಂದ ಅತಿಥಿ ಯಾರು? ಕಾಣಿ ಮಕ್ಕಳೇ, ಹೇಗೆ ಇದರ ಮೈಮೇಲೆಲ್ಲಾ ಬೆಳಕಿನ ಬರೆಗಳು! ಕಾಣಿ ಎಂದು ಕಡ್ಡಿ ಪರಕೆಯನ್ನು ತುಸು ಈಚೆ ಸರಿಸಿದರು. ಆ ಪುಟ್ಟ ಜೀವಿಯನ್ನು ಅವರು ಕೊಲ್ಲಲಿಲ್ಲ, ಬದಲಿಗೆ, ಪರಕೆಯ ಮೂಲಕ ಹಿಡಿಯಲು ಪ್ರಯತ್ನಿಸಿದ್ದರು. ಅವರು ಪೊರಕೆ ಎತ್ತಿದ್ದ ಜಾಗದಲ್ಲಿ, ಒಂದು ಪುಟ್ಟ ಜೀವಿ ಅತ್ತಿತ್ತ ನುಲಿಯುತ್ತಾ, ನಿಧಾನವಾಗಿ ತೆವಳಲು ಪ್ರಯತ್ನಿಸುತ್ತಿತ್ತು.

ಸುಮಾರು ಎರಡು ಇಂಚು ಉದ್ದ, ದಪ್ಪನೆಯ ದಾರದಷ್ಟು ದಪ್ಪ; ನಿಧಾನವಾಗಿ ತೆವಳುತ್ತಾ ಚಲಿಸುವ ಆ ಜೀವಿ ಸಂದಿಪದಿಯನ್ನು ಹೋಲುತ್ತಿದ್ದರೂ, ತುಸು ಭಿನ್ನವಾಗಿ ಕಾಣಿಸುತ್ತಿತ್ತು. ಅಚ್ಚರಿಯ ವಿಚಾರವೆಂದರೆ, ಅದರ ಹಸುರು ಮೈಮೇಲೆ, ಅಲ್ಲಲ್ಲಿ ಬೆಂಕಿಯಂಥ ಪುಟ್ಟ ಪುಟ್ಟ ಗೆರೆಗಳು!

ಅಮ್ಮಮ್ಮ ಹೇಳಿದಂತೆ ಬರೆಗಳು! ಅದು ಅತ್ತಿತ್ತ ನುಲಿಯುತ್ತಿದ್ದಂತೆ, ಆ ಬೆಂಕಿಯ ಗೆರೆಗಳು ಹೆಚ್ಚು ಹೆಚ್ಚು ಹೊಳೆದು ಕಾಣುತ್ತಿದ್ದವು. ಇದೇ ಕಾಣಿ ಸರಸ್ವತಿ ಚೇಳು! ಪರಕೆ ಕಡ್ಡಿಗಳು ತಾಗಿದ ಜಾಗದಲ್ಲಿ ಹೊಳೆಯುತ್ತಾ ಉಂಟು ಎಂದು ಅಮ್ಮಮ್ಮ ನಮಗೆ ಪರಿಸರದ ಪಾಠ ಹೇಳಿದರು! ಪೊರಕೆಯ ಒಂದೆರಡು ಕಡ್ಡಿಗಳನ್ನು ನಿಧಾನವಾಗಿ ಆ ಸರಸ್ವತಿ ಚೇಳಿಗೆ ತಾಗಿಸಿದರು- ಆ ಜಾಗದಲ್ಲಿ ಇನ್ನೂ ಒಂದೆರಡು ಬೆಳಕಿನ ಪಟ್ಟಿಗಳು ಅದರ ಮೈಮೇಲೆ ಕಾಣಿಸಿಕೊಂಡವು.

ಪೊರಕೆಯ ಕಡ್ಡಿ ತಾಗಿದ ಜಾಗದಲ್ಲೆಲ್ಲಾ ಮಿನುಗುವ ಗೆರೆಗಳು ಉತ್ಪತ್ತಿಯಾಗುವ ಆ ಕ್ರಿಯೆಯು, ಅದರ ದೇಹದ ಮೇಲೆಲ್ಲಾ ಬೆಳಕಿನ ಪುಟ್ಟ ಬಾಸುಂಡೆಗಳನ್ನೇ ಸೃಷ್ಟಿಸಿದ್ದವು.

ಸರಸ್ವತಿ ಚೇಳು ಮನೆಯೊಳಗೆ ಬಂದರೆ ಒಳ್ಳೆಯದು ಅಂತಾರೆ. ಅದನ್ನು ಸಾಯಿಸುವಂತಿಲ್ಲ. ಲಕ್ಷ್ಮಿ ಚೇಳು ಬಂದರೂ ಅಷ್ಟೆ, ಮನೆಗೆ ಒಳ್ಳೆಯದು. ಇವನ್ನು ನಿಧಾನವಾಗಿ ಹೊರಗೆ ಬಿಡಬೇಕು. ಸರಸ್ವತಿ ಚೇಳು ತನ್ನ ಮೈಮೇಲೆ ಬೆಳಕಿನ ಬರೆಗಳನ್ನು ಮೂಡಿಸುವುದನ್ನು ತೋರಿಸುವುದಕ್ಕೋಸ್ಕರ, ಮೆಲ್ಲಗೆ ಒಂದು ಪೆಟ್ಟು ಹಾಕಿದೆ ಅಷ್ಟೆ. ಅದರ ಮೈ ಮಿಣಕು ಮಿಣಕು ಅಂಬುದನ್ನು ಕಂಡ್ರ್ಯಾ? ಇನ್ನು ಹೊರಗೆ ಬಿಡುವ ಎನ್ನುತ್ತಾ, ಕಡ್ಡಿ ಪೊರಕೆಯನ್ನು ನಿಧಾನವಾಗಿ ಸರಸ್ವತಿ ಚೇಳಿನ ಮೇಲಿಟ್ಟು, ಕಡ್ಡಿಗಳ ಸಂದಿಯಲ್ಲಿ ಅದನ್ನು ಹಿಡಿದು, ಅಂಗಳದಾಚೆಯ ತೆಂಗಿನ ಕಟ್ಟೆಯಲ್ಲಿ ಬಿಟ್ಟು ಬಂದರು.

ಆವತ್ತಿನ ನಮ್ಮ ಪಠ್ಯ ಅಧ್ಯಯನಕ್ಕೆ ವಿರಾಮ ಬಿತ್ತು. ಸರಸ್ವತಿ ಚೇಳಿನ ನಾಜೂಕಾದ ಪುಟಾಣಿ ಗಾತ್ರ ವಂತೂ ವಿಸ್ಮಯ ಹುಟ್ಟಿಸುವಂಥದ್ದು. ಬೇರೆ ಬೇರೆ ಸಂದರ್ಭಗಳಲ್ಲಿ ಆಗಾಗ ಮನೆಯೊಳಗೆ ಬರುವ ಅವು, ಅಂದಾಜು ಒಂದು ಇಂಚಿನಿಂದ ಎರಡು-ಎರಡೂವರೆ ಇಂಚು ಉದ್ದವಿದ್ದುದನ್ನು ಕಂಡಿದ್ದೆ. ಅದಕ್ಕೂ ಉದ್ದನೆಯ ಸರಸ್ವತಿ ಚೇಳನ್ನು ನಾನು ಕಂಡಿಲ್ಲ.

ಇದಕ್ಕಿಂತ ವಿಭಿನ್ನ ಪ್ರಭೇದದ, ಮೈಮೇಲೆ ಪಟ್ಟೆ ಪಟ್ಟೆ ಬಣ್ಣ ಇರುವ ಲಕ್ಷ್ಮಿ ಚೇಳುಗಳು ಇನ್ನೂ ಉದ್ದ, ದಪ್ಪ ಇರುತ್ತವೆ. ಸಣ್ಣ ಕಡ್ಡಿಯನ್ನು ಸರಸ್ವತಿ ಚೇಳಿನ ನುಣುಪು ಮೈಗೆ ತಾಗಿಸಿದ ತಕ್ಷಣ, ಆ ಜಾಗ ಮಾತ್ರ ಬಾಸುಂಡೆ ಬಂದಂತೆ ಮಿನುಗುವುದು, ಈ ಪ್ರಕೃತಿಯ ಒಂದು ವಿಸ್ಮಯವೇ ಸರಿ. ಅದೇನು ರಕ್ಷಣಾ ತಂತ್ರವೋ? ಬೇರೆ ಜೀವಿಗಳು ತಾಗಿದರೆ ಅಥವಾ ಅಪಾಯ ಸನಿಹವಾದಾಗ, ಮೈತುಂಬಾ ಮಿನುಗುವ ಬೆಳಕನ್ನು ಉತ್ಪಾದಿಸಿ, ವೈರಿಯನ್ನು ಬೆದರಿಸುವ ತಂತ್ರವೋ? ಬಹಳ ಸೂಕ್ಷ್ಮ ದೇಹದ, ನಿಧಾನವಾಗಿ ನೆಲದ ಮೇಲೆ ತೆವಳುವ ಸರಸ್ವತಿ ಚೇಳಿನ ಮೈಮೇಲಿನ ಬೆಳಕಿನ ಬಾಸುಂಡೆಯನ್ನು, ವಿಕಾಸವಾದದ ಹಿನ್ನೆಲೆಯಲ್ಲಿ ಯಾವ ರೀತಿ ಅರ್ಥೈಸುವುದೋ ನನಗೆ ಸ್ಪಷ್ಟವಿಲ್ಲ. ಇದಕ್ಕೆ ವೈಜ್ಞಾನಿಕ ಉತ್ತರವಿದ್ದೇ ಇರುತ್ತದೆ, ವಿಷಯ ತಜ್ಞರು ಈ ಕುರಿತು ವಿವರಣೆ ನೀಡಬಲ್ಲರು.

ಇತ್ತ ಮನೆಯೊಳಗೆ ಸರಸ್ವತಿ ಚೇಳು ಮಿನುಗುತ್ತಿದ್ದರೆ, ಅತ್ತ ಮನೆಯ ಹೊರಭಾಗದಲ್ಲಿ (ಒಮ್ಮೊಮ್ಮೆ ಒಳಗೂ) ಹಾರಾಡುವ ಮಿಣುಕುಹುಳಗಳ ಬೆಳಕು ಇದಕ್ಕಿಂತ ವಿಭಿನ್ನ. ಅವು ತಮ್ಮ ಬಾಲದ ತುದಿಯಲ್ಲಿ ಮಿಣುಕು ಮಿಣುಕು ಎಂದು ಬೆಳಕು ಮಾಡುತ್ತಾ, ರಾತ್ರಿಯಾಗಸದಲ್ಲಿ ಹಾರಾಡುತ್ತಿರುತ್ತವೆ. ಆದರೆ, ಸರಸ್ವತಿ ಚೇಳಿನ ದೇಹದ ಮೇಲ್ಭಾಗದಲ್ಲಿ, ಸಣ್ಣದಾಗಿ ಏಟಾದಾಗ ಒಡಮೂಡುವ ಬೆಳಕಿನ ಬಾಸುಂಡೆ ಮಿಣುಕು ಹುಳಗಳ ಬೆಳಕಿಗಿಂತ ಭಿನ್ನ. ಸರಸ್ವತಿ ಚೇಳಿನ ದೇಹದ ಮೇಲೆ ಏನಾದರೂ ಸಣ್ಣ ಏಟು ಅಕಸ್ಮಾತ್ ಬೀಳದೇ ಇದ್ದರೆ, ಅದು ಬೆಳಗುವುದೇ ಇಲ್ಲ!

ಬಳುಕುವ ಹಸುರು ದೇಹವನ್ನು ಹೊತ್ತು ತನ್ನ ಪಾಡಿಗೆ ತಾನು ತೆವಳುತ್ತಾ ಸಾಗುತ್ತದೆ, ಅಷ್ಟೆ. ನೆಲದ ಮೇಲೆ ತೆವಳುತ್ತಾ ಬೆಳಕು ಬೀರುವ ಇತರ ಕೀಟಗಳೂ ನಮ್ಮ ಹಳ್ಳಿಯಲ್ಲಿವೆ; ಆದರೆ ಅವು ಮನೆಯೊಳಗೆ ಬರುವುದೂ ಕಡಿಮೆ, ಮತ್ತು ಸರಸ್ವತಿ ಚೇಳಿನಷ್ಟು ಸೂಕ್ಷ್ಮ ದೇಹದವುಗಳಲ್ಲ.

ನಮ್ಮ ಹಳ್ಳಿ ಮನೆಯ ಸುತ್ತಮುತ್ತ ವಿದ್ಯುತ್ ಸಂಪರ್ಕ ದೊರೆತದ್ದು, ತೀರಾ ತಡವಾಗಿ. ಹಾಲಾಡಿ ಪೇಟೆಯಲ್ಲಿ 1960-70ರ ದಶಕದಲ್ಲೇ ವಿದ್ಯುದ್ದೀಪಗಳು ಬೆಳಗಿದ್ದವು. ಆದರೆ, ಪೇಟೆಯ ರಸ್ತೆಯಿಂದ ಸುಮಾರು 3 ಕಿ.ಮೀ. ದೂರದಲ್ಲಿದ್ದ ನಮ್ಮ ಹಳ್ಳಿ ಮನೆಯ ಸರಹದ್ದಿಗೆ ವಿದ್ಯುತ್ ಸಂಪರ್ಕ ತರಲು ನಾನಾ ವಿಘ್ನಗಳು.

ಕಂಬದ ಬೆಲೆ ಇಂತಿಷ್ಟು ಎಂದು ಲೆಕ್ಕಹಾಕಿ, ಎಷ್ಟು ಕಂಬ ಬೇಕೊ ಅಷ್ಟು ದುಡ್ಡು ಕೊಟ್ಟರೆ ವಿದ್ಯುತ್ ಕೊಡ್ತಾರಂತೆ, ಪಂಪ್ ಸೆಟ್ ಹಾಕಿಸಿಕೊಂಡರೆ ಬೇಗನೆ ವಿದ್ಯುತ್ ಸಂಪರ್ಕ ಕೊಡ್ತಾರಂತೆ- ಈ ರೀತಿಯ ಮಾತುಗಳು ನಮ್ಮ ಹಳ್ಳಿಯಲ್ಲಿ ಅದೆಷ್ಟು ಬಾರಿ ಚರ್ಚೆಗೆ ಒಳಗಾದವೋ ಲೆಕ್ಕವಿಲ್ಲ. ಕೊನೆಗೂ 1990ರ ದಶಕದಲ್ಲಿ ನಮ್ಮ ಹಳ್ಳಿ ಮನೆಗೆ ವಿದ್ಯುತ್ ಸಂಪರ್ಕ ದೊರಕಿತು; ಅದಕ್ಕಾಗಿ ನಮ್ಮಪ್ಪ ಸಾಕಷ್ಟು ಓಡಾಡಿ, ಚಪ್ಪಲಿ ಸವೆಸಿದರು.

ಮನೆಯೊಳಗೆ ವಿದ್ಯುತ್ ಬಲ್ಬ್‌ಗಳು ಬೆಳಗಲು ಆರಂಭಿಸಿದ ನಂತರ, ಸರಸ್ವತಿ ಚೇಳಿನ ಮೈಮೇಲಿನ ಬೆಳಕನ್ನು ನಾವು ಕಾಣಲು ಸಾಧ್ಯವಾಗಲಿಲ್ಲ! ಏಕೆಂದರೆ, ಅದರ ಮೈ ಮೇಲೆ ಮೂಡುವ ಬೆಳಕಿನ ಬಾಸುಂಡೆಗಳು ತುಂಬಾ ಸೂಕ್ಷ್ಮ; ಕತ್ತಲಿನ ಪ್ರದೇಶವಿದ್ದರೆ, ಬುಡ್ಡಿ ದೀಪದ ಮಂಕು ಬೆಳಕಿದ್ದರೆ ಮಾತ್ರ ಕಾಣಿಸುವಷ್ಟು ತೆಳುವಾದ ಬೆಳಕು ಅದು.

ವಿದ್ಯುತ್ ದೀಪದ ಪ್ರಖರತೆಯಲ್ಲಿ, ಬರಿಗಣ್ಣಿಗೆ ಗೋಚರವಾಗದಷ್ಟು ಸಣ್ಣ ಪ್ರಮಾಣದ ಬೆಳಕು. ಅದನ್ನು ಪೊರಕೆಯಲ್ಲಿ ಜೋಪಾನವಾಗಿ ಹಿಡಿದು, ಮನೆಯಿಂದು ತುಸು ದೂರ, ವಿದ್ಯುತ್ ದೀಪದ ಪ್ರಖರತೆಯ ವಲಯದಿಂದಾಚೆ ತೆಗೆದುಕೊಂಡು ಹೋಗಿ, ಐದು ನಿಮಿಷ ಅಲ್ಲೇ ಕತ್ತಲಲ್ಲಿ ನಿಂತು, ರಾತ್ರಿಯ ಕಗ್ಗತ್ತಲಿಗೆ ಕಣ್ಣುಗಳು ಹೊಂದಿಕೊಂಡ ನಂತರ, ಸರಸ್ವತಿ ಚೇಳಿನ ಮೈಮೇಲಿನ ಬೆಳಕಿನ ಬಾಸುಂಡೆಗಳನ್ನು ನೋಡುವ ಪ್ರಯತ್ನ ಮಾಡಿದ್ದುಂಟು.

ಆದರೆ ವಿದ್ಯುತ್ ಸಂಪರ್ಕ, ಟಿವಿ, ಮಣ ಭಾರದಷ್ಟು ಹೋಂವರ್ಕ್, ನಂತರ ಮೊಬೈಲ್ ಮೊದಲಾದವುಗಳು ನಮ್ಮ ಹಳ್ಳಿಯ ದಿನಚರಿಯಲ್ಲಿ ಪ್ರವೇಶಿದ ನಂತರ, ಮೇಲ್ನೋಟಕ್ಕೆ ಕ್ಷುಲ್ಲಕವಾಗಿ ಕಾಣುವ, ಸಣ್ಣ ಗಾತ್ರದ ಸರಸ್ವತಿ ಚೇಳಿನ ಬೆಳಕಿನ ಬಾಸುಂಡೆಯಂಥ ವಿಸ್ಮಯಗಳು, ಇಂದಿನ ಮಕ್ಕಳ ಅರಿವಿನ ಪರಿಧಿಯಿಂದ ದೂರ ಹೊರಟು ಹೋಗಿವೆ.

ರಾತ್ರಿ ಹೊತ್ತಿನಲ್ಲಿ ಮನೆಯೊಳಗೆ ಬರುವ, ಮೈಮೇಲೆ ಪುಟ್ಟ ಏಟಾದ ತಕ್ಷಣ ಅಲ್ಲಿ ಬೆಂಕಿಯಂಥ ಬೆಳಕನ್ನು ಹೊರಸೂಸುವ, ಎರಡು ಇಂಚು ಉದ್ದದ ಸರಸ್ವತಿ ಚೇಳು ನಮ್ಮ ಹಳ್ಳಿಯ ವಿಸ್ಮಯ. ಅದರ ವೈಜ್ಞಾನಿಕ ನಾಮಧೇಯವನ್ನು ತಿಳಿದುಕೊಳ್ಳುವ ನನ್ನ ಪ್ರಯತ್ನ ಇದುವರೆಗೆ ಸಫಲವಾಗಿಲ್ಲ. ನಿಮಗೇನಾದರೂ ಗೊತ್ತೇ? ಗೊತ್ತಿದ್ದರೆ ತಿಳಿಸಿ!

**- ಶಶಿಧರ** ಹಾಲಾಡಿ





## ಮೊಬೈಲ್ ಬಿಡಿ, ಪುಸ್ತಕ ಹಿಡಿ ಅಭಿಯಾನಕ್ಕೆ ಸಿಗಲಿ ಬೆಂಬಲ

ಮಕ್ಕಳಲ್ಲಿ ಮೊಬೈಲ್ ಚಟವನ್ನು ಬಿಡಿಸಿ ಪುಸ್ತಕ ವಾಚನ ಹವ್ಯಾಸವನ್ನು ಬೆಳೆಸುವುದಕ್ಕಾಗಿ, ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಅಭಿಯಾನವನ್ನು ನವೆಂಬರ್ 14ರಿಂದ ಆರಂಭಿಸಲಾಗುತ್ತದೆ ಎಂಬುದಾಗಿ ಶಿಕ್ಷಣ ಸಚಿವರು ಹೇಳಿದ್ದಾರೆ. ಇಂಥ ಅಭಿಯಾನವೊಂದನ್ನು ಆರಂಭಿಸಲಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಲವು ತಿಂಗಳುಗಳ ಹಿಂದೆ ಘೋಷಿಸಿದ್ದರು. ಇತ್ತೀಚೆಗಿನ ದಿನಗಳಲ್ಲಿ ಮಕ್ಕಳಲ್ಲಿ ಮೊಬೈಲ್ ಬಳಕೆ ಅತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸರಕಾರವೇ ಈ ಅಭಿಯಾನ ಆರಂಭಿಸಲು ನಿರ್ಧರಿಸಿರುವುದು ಶ್ಲಾಘನಾರ್ಹ.

ಸ್ಮಾರ್ಟ್ ಫೋನ್ ಬಳಕೆಗೆ ಬಂದ ಬಳಿಕ ಮೊಬೈಲ್ ಎಂಬ ಮಾಯಾಜಾಲದೊಳಗೆ ಜಗತ್ತು ಬಂಧಿಯಾಗಿದೆ. ಪ್ರತಿಯೊಂದು ಆವಿಷ್ಕಾರಗಳಿಗೂ ಒಳಿತು ಮತ್ತು ಕೆಡುಕು ಎಂಬ ಎರಡೂ ಮುಖಗಳು ಇರುವ ಹಾಗೆ ಸ್ಮಾರ್ಟ್ ಫೋನಿಗೂ ಇದೆ. ಇಂದು ಬಹುತೇಕ ಎಲ್ಲಮನೆಗಳಲ್ಲಿ ಕನಿಷ್ಠ ಒಂದಾದರೂ ಸ್ಮಾರ್ಟ್ ಫೋನ್ ಇದ್ದೇ ಇದೆ. ಹಾಗಾಗಿ ಎಳೆಯ ವಯಸ್ಸಿನಿಂದಲೇ ಮಕ್ಕಳು ಸ್ಮಾರ್ಟ್ ಫೋನ್ ಬಳಕೆಗೆ ಪರಿಚಿತರಾಗುತ್ತಿರುವುದು ಸಹಜ. ವಾರ್ಷಿಕ ಶೈಕ್ಷಣಿಕ ಸ್ಥಿತಿಗತಿ ವರದಿ (ಅಸರ್) -2024ರ ಪ್ರಕಾರ, ರಾಜ್ಯದಲ್ಲಿ ಶೇ. 98 ಮಕ್ಕಳಿಗೆ ಮನೆಯಲ್ಲಿಮೊಬೈಲ್ ಫೋನ್ ಲಭ್ಯತೆ ಇದೆ. ಇವರಲ್ಲಿ ಶೇ. 63 ಮಂದಿಗೆ ಶಾಲೆಗೆ ಸ್ಮಾರ್ಟ್ ಫೋನ್ ತರುವುದಕ್ಕೆ ಅನುಮತಿ ಇದೆ. ರಾಜ್ಯದ 14ರಿಂದ 16 ವಯೋಮಾನದ ಮಕ್ಕಳಲ್ಲಿ ಶೇ.70 ಮಂದಿ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ರಾಜ್ಯದಲ್ಲಿ 14ರಿಂದ 16ರ ಈ ವಯೋಗುಂಪಿನ ಸ್ಮಾರ್ಟ್ ಫೋನ್ ಬಳಕೆಯ ಬಗೆಗಿನ ಈ ಸ್ಥಿತಿಗತಿ ಇದೇ ವಯೋಮಾನದ ಮಕ್ಕಳ ಜಾಗತಿಕ ಸ್ಥಿತಿಗತಿಗೆ ತಾಳೆಯಾಗುತ್ತದೆ ಎಂಬುದಾಗಿ ಅಸರ್ ವರದಿ ಹೇಳಿದೆ.

ಮಕ್ಕಳಿಗೆ ಸ್ಮಾರ್ಟ್ ಫೋನ್ ಬಳಕೆ ಲಭ್ಯವಿದೆ, ಅವರು ಡಿಜಿಟಲ್ ಸಾಕ್ಷರರಾಗುತ್ತಿದ್ದಾರೆ ಎಂಬುದು ಒಳ್ಳೆಯದೇನೋ ನಿಜ. ಆದರೆ ಮೊಬೈಲ್ ಬಳಕೆ ಒಂದು ಗೀಳಾದರೆ ದೊಡ್ಡ ಸಮಸ್ಯೆ. ಈ ಹಿಂದೆ ಕೋವಿಡ್ ಕಾಲದಲ್ಲಿ ಪ್ರತ್ಯಕ್ಷ ತರಗತಿಗಳು ನಿಂತುಹೋದಾಗ ಆನ್ ಲೈನ್ ತರಗತಿಗಳು ನಡೆಯುತ್ತಿದ್ದವು. ಮಕ್ಕಳಲ್ಲಿ ಮೊಬೈಲ್ ಬಳಕೆ ಹೆಚ್ಚಲು ಆ ಕಾಲದಲ್ಲಿ ಸೃಷ್ಟಿಯಾದ ಅನಿವಾರ್ಯವೂ ಕಾರಣ. ಅತಿಯಾದ ಮೊಬೈಲ್ ಬಳಕೆಯಿಂದ ಬೆಳೆಯುತ್ತಿರುವ ಮಕ್ಕಳು ಹಲವು ಅನಾರೋಗ್ಯಗಳಿಗೆ ತುತ್ತಾಗಬಹುದಾಗಿದೆ. ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳು, ಏಕಾಗ್ರತೆಯ ಕೊರತೆ ಒಂದು ಕಡೆಯಾದರೆ ಮೊಬೈಲ್ ಬಳಕೆಯಿಂದ ಸೃಷ್ಟಿಯಾಗುವ ಭ್ರಮಾಲೋಕ, ಗೀಳು ಸ್ಥಿತಿ ಇನ್ನೊಂದು ಕಡೆ. ಇದರ ಜತೆಗೆ ಮಕ್ಕಳು ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗುವ ಮೂಲಕ ಅಪರಾಧ, ಲೈಂಗಿಕತೆ, ಅಶ್ಲೀಲತೆಗಳತ್ತ ಸೆಳೆಯಲ್ಪಡುವ ಸಾಧ್ಯತೆಗಳಿವೆ. ಅಪರಾಧ ಚಟುವಟಿಕೆಗೆ ಸುಲಭದ ತುತ್ತು ಕೂಡ ಆಗಬಲ್ಲರು. ಹೀಗೆ ಸ್ಮಾರ್ಟ್ ಫೋನ್ ಬಳಕೆ ಎಂಬುದು ಎರಡು ಅಲಗಿನ ಕತ್ತಿ ಇದ್ದಂತೆ. ಅದು ಮಿತ ಪ್ರಮಾಣದಲ್ಲಿ ಶೈಕ್ಷಣಿಕ ಮತ್ತು ಜ್ಞಾನವೃದ್ಧಿಯ ಉದ್ದೇಶಗಳಿಗೆ ಬಳಕೆಯಾದರೆ ಮಾತ್ರ ಕ್ಷೇಮ.

ಈ ಹಿನ್ನೆಲೆಯಲ್ಲಿ ಮಕ್ಕಳ ಮೊಬೈಲ್‌ಗೀಳನ್ನು ಬಿಡಿಸಿ, ಪುಸ್ತಕ ವಾಚನದಂತಹ ಉತ್ತಮ ಹವ್ಯಾಸದತ್ತ ಸೆಳೆಯುವ ಉದ್ದೇಶದಿಂದ ಸರಕಾರ, ಶಿಕ್ಷಣ ಇಲಾಖೆ ಅಭಿಯಾನ ಆರಂಭಿಸುತ್ತಿರುವುದು ಉತ್ತಮ ನಡೆ. ಶಾಲೆ ಕಾಲೇಜುಗಳಲ್ಲಿ ಈ ಅಭಿಯಾನ ಕ್ರಿಯಾಶೀಲವಾಗಿ ನಡೆಯಬೇಕು. ಇದಕ್ಕೆ ಸಾಥಿಯಾಗಿ ಮನೆಯಲ್ಲಿ ಹೆತ್ತವರಿಂದಲೂ ಪೂರಕ ವಾತಾವರಣ ಸೃಷ್ಟಿಯಾಗಬೇಕು. ಎಷ್ಟೋ ಮನೆಗಳಲ್ಲಿ ಹೆತ್ತವರೇ ಮಕ್ಕಳನ್ನು ಸುಮ್ಮನಿರಿಸುವುದಕ್ಕಾಗಿ ಕೈಗೆ ಮೊಬೈಲ್ ತುರುಕಿ ಬಿಡುವುದುಂಟು. ಇದು ನಿಲ್ಲಬೇಕು. ಪಾಲಕರು ಮೊಬೈಲ್ ಬಳಕೆಯ ವಿಷಯದಲ್ಲಿ ತಾವೇ ಮಕ್ಕಳಿಗೆ ಉತ್ತಮವಾದ ಒಂದು ಮಾದರಿಯನ್ನು ಹಾಕಿಕೊಟ್ಟರೆ ಮಕ್ಕಳು ಅದನ್ನು ಪಾಲಿಸುತ್ತಾರೆ. ಹೀಗಾಗಿ ಮೊಬೈಲ್ ಮಿತ ಬಳಕೆಯ ವಿಷಯ ಮತ್ತೊಮ್ಮೆ ಮನೆಯೇ ಮೊದಲ ಪಾಠಶಾಲೆ ಆಗಲಿ. ಆಗ ಈ ಅಭಿಯಾನ ಯಶಸ್ವಿಯಾಗಿ ಉದ್ದೇಶ ಈಡೇರಬಲ್ಲದು.

## ಸಹಾಯ ಮಾಡಲು ಹಿಂಜರಿಯದಿರಿ

ಒಬ್ಬ ದೋಣಿಯ ಮಾಲೀಕ ಬಣ್ಣ ಮಾಸಿದ್ದ ತನ್ನ ದೋಣಿಗೆ ಬಣ್ಣ ಬಳಿಯಲು ಪೇಂಟರ್‌ಗೆ ಒಪ್ಪಿಸಿದನು. ಆ ಪೇಂಟರ್ ಆ ದೋಣಿಗೆ ಬಣ್ಣ ಹಚ್ಚುತ್ತಿರುವಾಗ ದೋಣಿಯ ಕೆಳಭಾಗದಲ್ಲಿ ಒಂದು ರಂಧ್ರವನ್ನು ಗಮನಿಸಿದನು. ರಂಧ್ರವನ್ನು ಸರಿಪಡಿಸಿ, ಬಣ್ಣ ಹಚ್ಚಿ ತನ್ನ ಕೆಲಸ ಮುಗಿಸಿ ಹೊರಟುಹೋದನು.

ಎರಡು ದಿನಗಳ ನಂತರ ದೋಣಿಯ ಮಾಲೀಕರು ರೂ. ಒಂದು ಲಕ್ಷ ತಂದು ಪೇಂಟರ್‌ಗೆ ಕೊಟ್ಟ. ಆಗ ಪೇಟರ್ ನನ್ನ ಹಣವನ್ನು ಆಗಲೇ ಕೊಟ್ಟಿರುವಿರಲ್ಲಾ, ಮತ್ತೆ ಈ ಹಣ ಏಕೆ!! ಎಂದು ಆಶ್ಚರ್ಯಭರಿತ ಸಂದೇಹದಿಂದ ಕೇಳಿದನು.


ಇದು ನೀನು ಪೇಂಟ್ ಮಾಡಿದುದಕ್ಕಲ್ಲ, ನೀನು ದೋಣಿಯ ಆ ರಂಧ್ರವನ್ನು ಮುಚ್ಚಿ ಸರಿಪಡಿಸಿದುದಕ್ಕಾಗಿ! ಎಂದು ಕಣ್ಣೀರಿಡುತ್ತಾ ಆ ದೋಣಿಯ ಮಾಲಿಕ ಹೇಳಿದರು.

ಅದು ತುಂಬಾ ಚಿಕ್ಕದು. ಹಣ ತೆಗೆದುಕೊಳ್ಳುವಷ್ಟು ದೊಡ್ಡದಲ್ಲ ಎಂದನು ಪೇಂಟರ್.

ಅದು ಹಾಗಲ್ಲ, ನಿನಗೆ ಬಣ್ಣ ಬಳಿಯುವ ಕೆಲಸ ಒಪ್ಪಿಸಿದಾಗ ಆ ದೋಣಿಯಲ್ಲಿ ರಂಧ್ರವಿದೆ ಎಂದು ಹೇಳಲು ನಾನು ಮರೆತಿದ್ದೆ. ನಂತರ ನಮ್ಮ ಮಕ್ಕಳು ಸಮುದ್ರದಲ್ಲಿ ಮೀನು ಹಿಡಿಯಲು ದೋಣಿಯಲ್ಲಿ ಹೋದರು. ದೋಣಿಯ ರಂಧ್ರದ ಬಗ್ಗೆ ಅವರಿಗೆ ತಿಳಿದಿರಲಿಲ್ಲ, ನಾನೂ ಸಹ ಅವರಿಗೆ ಹೇಳಲು ಮರೆತಿದ್ದೆ. ಅವರು ಸಮುದ್ರಕ್ಕೆ ಹೋಗಿದ್ದಾರೆ ಎಂದು ತಿಳಿದು ನನಗೆ ವಿಪರೀತ ಭಯ ಶುರುವಾಯಿತು. ನಾನು ರಿಪೇರಿ ಮಾಡು ಎಂದು ನಿನಗೆ ಹೇಳುವುದನನ್ನ ಮರೆತಿದ್ದೆ. ಅವರು ಸುರಕ್ಷಿತವಾಗಿ ಹಿಂತಿರುಗಿದ ನಂತರ, ರಂಧ್ರವನ್ನು ತುಂಬಿ ದುರಸ್ತಿ ಮಾಡಿರುವುದನ್ನು ನಾನು ನೋಡಿದೆ. ನಾನು ಹೇಳದಿದ್ದರೂ ನೀನು ಅದನ್ನು ಸರಿಮಾಡಿದುದ್ದಕ್ಕೆ ನಿನಗೆ ಹೇಗೆ ಕೃತಜ್ಞತೆ ಹೇಳಬೇಕೋ ತಿಳಿಯುತ್ತಿಲ್ಲ. ನಿನ್ನ ಈ ಚಿಕ್ಕ ಸಹಾಯ ನನ್ನ ಮಕ್ಕಳ ಜೀವ ಉಳಿಸಿತು ಎಂದೆನ್ನುತ್ತಾ ಆ ದುಡ್ಡನ್ನು ಅಲ್ಲಿಟ್ಟು ಹೊರಟು ಹೋದನು.

ಮಿತ್ರರೇ ಈ ಕಥೆಯ ಸಾರ ಇಷ್ಟೇ - ಯಾರು? ಏನು? ಏಕೆ? ಎಂದು ಆಲೋಚಿಸದೆ ಸಹಾಯ ಮಾಡಿರಿ, ಎಷ್ಟು ಸಣ್ಣದಾದರೂ ಸಹಾಯ ಮಾಡಲು ಹಿಂಜರಿಯದಿರಿ, ಏಕೆಂದರೆ ನೀವು ಮಾಡುವ ಒಂದು ಅತೀ ಚಿಕ್ಕ ಸಹಾಯವೂ ಇನ್ನೊಬ್ಬರಿಗೆ ಮೌಲ್ಯಯುಕ್ತವಾಗಿರಬಹುದು.

**- ಸಂಪಿಗೆ ವಾಸು,** ಬಳ್ಳಾರಿ



**ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ಅಗತ್ಯ: ಶಾಸಕ .ಬಾಲಕೃಷ್ಣ**

# ಮೌಲ್ಯಯುತ ಶಿಕ್ಷಣದ ಜೊತೆಗೆ ವಿವೇಕವೂ ಮುಖ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮೌಲ್ಯಯುತ ಶಿಕ್ಷಣದ ಜೊತೆಗೆ ವಿವೇಕತೆ ಅಳವಡಿಸಿಕೊಂಡು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 2025-26 ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ರೆಡ್ ಕ್ರಾಸ್, ರೆಡ್ ರಿಬ್ಬನ್ ಹಾಗೂ ಇತರೆ ಕಾರ್ಯಕ್ರಮಗಳಿಗೆ ಚಾಲನೆ ನೀಡಿ, ಶಿಕ್ಷಣವು ಬದುಕಿನ ಮೆಟ್ಟಿಲು ಎಂದರು.

ತಾಲೂಕಿನಲ್ಲಿರುವ ಸರ್ಕಾರಿ ಹಿರಿಯ, ಕಿರಿಯ, ಪ್ರೌಢಶಾಲೆ ಹಾಗೂ ಕಾಲೇಜುಗಳ ಶೈಕ್ಷಣಿಕ ವ್ಯವಸ್ಥೆಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹಿರೀಸಾವೆ ಪ್ರಥಮ ದರ್ಜೆ ಕಾಲೇಜಿನ ಹೆಚ್ಚಿನ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ಕಲ್ಪಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದ್ದು ಮತ್ತಷ್ಟು ಅಭಿವೃದ್ಧಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.



ಇತ್ತೀಚಿನ ದಿನಗಳಲ್ಲಿ ಡ್ರಗ್ಸ್ ಮಾಫಿಯಾ ತಲೆದೋರುತ್ತಿದ್ದು ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಸ್ನೇಹಿತರನ್ನಾಗಿ ಹಾಗೂ ವಿದ್ಯೆಯನ್ನು ದೀಕ್ಷೆಯಾಗಿ ಸ್ವೀಕರಿಸಿ ತಮ್ಮ ಬದುಕನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಾಲಿಗೆಗೆ ಹೆಚ್ಚು ರುಚಿ ನೀಡುವ ಆಹಾರವು ಆರೋಗ್ಯಕ್ಕೆ ಅಷ್ಟೇ ಹಾನಿಕಾರಕವಾಗಿರುತ್ತದೆ. ಹಣ, ಆಸ್ತಿ ಸಂಪಾದನೆಗಿಂತ ಆರೋಗ್ಯ ಉಳಿಸಿಕೊಳ್ಳುವುದು ಅತಿ ಮುಖ್ಯವಾದ ಸಂಗತಿಯಾಗಿದೆ. ಪೌಷ್ಟಿಕ ಆಹಾರ ಸೇವನೆಯ ಜೊತೆಗೆ ಯೋಗ ಹಾಗೂ ಧ್ಯಾನವನ್ನು ದೈನಂದಿನ ಬದುಕಿನಲ್ಲಿ ದಿನಚರಿಯಾಗಿ ರೂಢಿಸಿಕೊಳ್ಳಿ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬ್ಯಾಂಕಿಂಗ್ ವ್ಯವಹಾರದಲ್ಲಿ ಗೌಪ್ಯತೆ ಇರಲಿ. ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ಖಾತೆಗಳನ್ನು ಅಪರಿಚಿತರು ಹ್ಯಾಕ್ ಮಾಡಿ ಹಣ ದೋಚುವ ದಂದೆ ಮಾಡಿಕೊಂಡಿದ್ದಾರೆ. ಇದರಿಂದ ನಾಡಿನ ಜನತೆಯ 235 ಕೋಟಿ ರೂ. ಹಣ ಲೂಟಿಯಾಗಿದೆ. ಗ್ರಾಮೀಣ ಭಾಗದ ಜನತೆ ಕಷ್ಟಪಟ್ಟು ಕೂಡಿಟ್ಟ ಹಣ ಖದೀಮರ ಪಾಲಾಗುತ್ತಿದೆ. ದಯವಿಟ್ಟು ಜನತೆ ತಮ್ಮ ಬ್ಯಾಂಕ್ ವ್ಯವಹಾರದ ಬಗ್ಗೆ ಹೆಚ್ಚು ಜ್ಞಾನ ಬೆಳೆಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ. ಎ.ಟಿ. ಶಿವರಾಮು ಮಾತನಾಡಿ, ನಮ್ಮಲ್ಲಿರುವ ಜ್ಞಾನವನ್ನು ಉತ್ತಮ ಕಾರ್ಯಗಳಿಗೆ ಸರಿಯಾಗಿ ಬಳಸಿಕೊಳ್ಳುವ ಮೂಲಕ ಸಮಾಜದ ಏಳಿಗೆಗೆ ಪೂರಕವಾಗಿ ಬದುಕುವುದು ಅಗತ್ಯ. ವಿಷಯ ಯಾವುದೇ ಆಗಲಿ ಅದನ್ನು ಅರಿಯುವ ಜ್ಞಾನ ಬೇಕು ಎಂದರು.

ಶೈಕ್ಷಣಿಕ ವ್ಯವಸ್ಥೆ ಅಭಿವೃದ್ಧಿಗೊಂಡರೆ ಸಾಲದು ಮಕ್ಕಳಲ್ಲಿ ಅಪಾರಜ್ಞಾನ ಬೆಳೆಯಬೇಕು. ಶಿಕ್ಷಣ ಹೆಚ್ಚಿದಂತೆಲ್ಲ ಪಾಲಕರು ಮಕ್ಕಳನ್ನು ಪ್ರಶ್ನಿಸಲು ಭಯಪಡುವ ಅಥವಾ ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ. ಮೌಲ್ಯಯುತ ಶಿಕ್ಷಣ ಅಗತ್ಯ ಎಂದು ತಿಳಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಬಿ.ಎಚ್. ಲಕ್ಷ್ಮಣಗೌಡ, ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನ ಪ್ರಾಂಶುಪಾಲ ಲೋಕೇಶ್, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್.ಆರ್.ಮರುಳಾರಾಧ್ಯ, ಸಾಂಸ್ಕೃತಿಕ ಸಮಿತಿ ಸಂಚಾಲಕ ಡಾ. ಮಂಜುನಾಥ್ ಎಂ.ಕೆ, ರೆಡ್ ರಿಬ್ಬನ್ ಸಮಿತಿ ಸಂಚಾಲಕ ಹೆಚ್.ಜೆ.ಹರೀಶ್, ಕ್ರೀಡಾ ಸಮಿತಿ ಸಂಚಾಲಕರಾದ ಎಸ್.ರಾಘವೇಂದ್ರ, ಪ್ರಮುಖರಾದ ವಿಶ್ವಣ್ಣ, ಉಪನ್ಯಾಸಕ ವೃಂದ ಹಾಗೂ ಇತರರು ಹಾಜರಿದ್ದರು.

## ರಾಜ್ಯದ ಪ್ರಗತಿಗೆ ಮಠ ಮಾನ್ಯಗಳ ಕೊಡುಗೆ ಅಪಾರ

» ಮೊದಲನೇ ಪುಟದಿಂದ

ಕಾಲಿಟ್ಟಿದ್ದು ಹೆಮ್ಮೆ ತರಿಸಿದೆ. ಎಸ್.ಎಂ.ಕೃಷ್ಣ ನಗರದಲ್ಲಿ 100 ಬೆಡ್ ಸಾಮರ್ಥ್ಯದ ಆಸ್ಪತ್ರೆಯನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪನವರು ಈ ಕುರಿತು ಮುಖ್ಯಮಂತ್ರಿ ಜೊತೆ ಚರ್ಚಿಸಿ ಸರ್ಕಾರಕ್ಕೆ ಕಟ್ಟುವ ಹಣದಲ್ಲಿ ರಿಯಾಯಿತಿ ಕೊಡಿಸಬೇಕು. ಈ ವಿಚಾರದಲ್ಲಿ ನಾನೂ ನಿಮ್ಮ ಜೊತೆಗಿರುತ್ತೇನೆಂದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಸಮಾಜದ ಉದ್ಧಾರಕ್ಕಾಗಿ ಮಠವು ಹೆಮ್ಮೆಯ ಕೆಲಸ ಮಾಡುತ್ತಿದೆ. ನಾನು ಕೂಡ ಮಠದ ಭಕ್ತನಾಗಿದ್ದು ಪೂಜೆ ಧಾರ್ಮಿಕತೆ ಜೊತೆ ಜೊತೆಗೆ ಮಹಿಳೆಯರ ಸಬಲೀಕರಣ, ಆರೋಗ್ಯ, ಶಿಕ್ಷಣ, ವೈದ್ಯಕೀಯ, ತಾಂತ್ರಿಕ ಕ್ಷೇತ್ರದಲ್ಲಿ ಮಠದ ವತಿಯಿಂದ ಅನೇಕ ಕೆಲಸಗಳು ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಸಾರ್ವಜನಿಕರಿಗೆ ಬಡವರಿಗೆ ಸೇವೆ ಒದಗಿಸಲು ಆಸ್ಪತ್ರೆ ತೆರೆಯುವ ಮೂಲಕ ತಮ್ಮ ವ್ಯಾಪ್ತಿಯಲ್ಲಿ ಸಾಮಾಜಿಕ ಕೊಡುಗೆ ನೀಡುತ್ತಿರುವ ಮಠದ ಕಾರ್ಯ ಇದೇ ರೀತಿ ಮುಂದುವರೆಯಲಿ ಎಂದರು.

ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾಧಿಕಾರ ಅಧ್ಯಕ್ಷ ಗುರುಪ್ರಸಾದ್ ಮಾತ ನಾಡಿದರು. ಮಹಾನಗರ ಪಾಲಿಕೆ ಮೇಯರ್ ಗಿರೀಶ್ ಚನ್ನವೀರಪ್ಪ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಉದ್ಯಮಿ ಗ್ರಾನೈಟ್ ರಾಜಶೇಖರ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ಶ್ರೀನಿವಾಸ್, ಜಿ.ಕುಮಾರ ಸ್ವಾಮಿ, ಅಶೋಕ್, ಕಟ್ಟಾಯ ಶಿವಕುಮಾರ್, ಮಮತಾ ಪಾಟೀಲ್ ಇತರರಿದ್ದರು.




**ಹಾಸನ: ನಗರದಲ್ಲಿ ರೋಟರಿ ಜಿಲ್ಲೆ 3182 ವಲಯ 9ರ ವತಿಯಿಂದ ಪೋಲಿಯೋ ಮುಕ್ತ ಭಾರತ ಹಾಗು ಸಂಚಾರಿ ಜಾಗೃತಿ ಜಾಥಾ ನಡೆಯಿತು. ರೋಟರಿ ಅಸಿಸ್ಟೆಂಟ್ ಗವರ್ನರ್ ಮಂಜುನಾಥ, ರೋಟರಿಯನ್‌ಗಳಾದ ಬಿ.ಆರ್.ಬೊಮ್ಮೇಗೌಡ, ಬಿ.ಕೆ.ಗಂಗಾಧರ್, ಯೋಗೇಶ್, ವಿಕ್ರಂ, ರಮೇಶ್, ದಿಲೀಪ್, ಸ್ಕೌಟ್ ಆ್ಯಂಡ್ ಗೈಡ್ಸ್‌ನ ಗಿರೀಶ್ ಮತ್ತಿತರರು ಹಾಜರಿದ್ದರು.**

## ರಾಜ್ಯಮಟ್ಟದ ಸಮಾವೇಶ

**ಶ್ರವಣಬೆಳಗೊಳ:** ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ಅ.26 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಶ್ರವಣಬೆಳಗೊಳದ ಗಣ್ಯರ ಅತಿಥಿ ಗೃಹದಲ್ಲಿ ರಾಜ್ಯ ಮಟ್ಟದ ಜಿಲ್ಲಾಧ್ಯಕ್ಷರ ಸಮಾವೇಶ ನಡೆಯಲಿದೆ.

ಶ್ರವಣಬೆಳಗೊಳ ಶ್ರೀ ದಿಗಂಬರ ಜೈನ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು ಸೇರಿದಂತೆ ಇನ್ನಿತರ ಸ್ವಾಮೀಜಿಗಳು ಭಾಗವಹಿಸಲಿದ್ದಾರೆ.

## ನೇಮಕಾತಿ ನಿಯಮ ತಿದ್ದುಪಡಿಗೆ ಆಕ್ಷೇಪಣೆ




• ಪ್ರಜೋದಯ ವರದಿ

**ಹಾಸನ:** ಶಿಕ್ಷಕರ ವೃಂದ ಹಾಗು ನೇಮಕಾತಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದ ಕರಡು ನಿಯಮಗಳ ವಿರುದ್ಧ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಶನಿವಾರ ಪ್ರತಿಭಟನೆ ನಡೆಸಿ ಆಕ್ಷೇಪಣೆ ಸಲ್ಲಿಸಲಾಯಿತು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ ಮಂಜೇಗೌಡ ಅವರು ಮಾತನಾಡಿ, ರಾಜ್ಯ ಸರ್ಕಾರ ಕಳೆದ ಅ.16 ರಂದು ಹೊರಡಿಸಿದ ಅಧಿಸೂಚನೆಯಂತೆ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಕರಡು ಪ್ರಕಟಿಸಿದ್ದು, ಅದರ ಕುರಿತು ಪ್ರತಿಯೊಬ್ಬ ಶಿಕ್ಷಕರು ತಮ್ಮ ಆಕ್ಷೇಪಣೆ ಮತ್ತು ಸಲಹೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಜಿಲ್ಲೆಯಾದ್ಯಂತ ತಾಲ್ಲೂಕು ಘಟಕಗಳ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಆಕ್ಷೇಪಣಾ ಪತ್ರ ಕಳುಹಿಸಬೇಂದು ವಿನಂತಿಸುತ್ತೇವೆ ಎಂದು ಅವರು ಮನವಿ ಮಾಡಿದರು.

ಆಕ್ಷೇಪಣೆಯನ್ನು ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, 6ನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ಬೀದಿ, ಬೆಂಗಳೂರು 560001 ಇಲ್ಲಿಗೆ ಅ.29 ರೊಳಗೆ ತಲುಪುವಂತೆ ಕೋರಿದರು.

ತಾಲ್ಲೂಕು ಅಧ್ಯಕ್ಷ ಅಣ್ಣೇಗೌಡ, ಸರ್ಕಾರಿ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ರವೀಂದ್ರ, ಗುಡುಗನಹಳ್ಳಿ ಮಂಜುನಾಥ, ನಾಯಕರಹಳ್ಳಿ ಮಂಜೇಗೌಡ, ಲೋಹಿತ್ ಜವರಪ್ಪ, ಹೆಚ್.ಆರ್.ಶೇಖರ್ ಮತ್ತು ಹಲವು ಶಿಕ್ಷಕರು ಉಪಸ್ಥಿತರಿದ್ದರು.

# ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ವಿಫಲ

## ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಶಿವಪ್ಪ ಆರೋಪ

• ಪ್ರಜೋದಯ ವರದಿ

**ಹಾಸನ:** ಸರ್ಕಾರ ಸರ್ಕಾರಿ ಶಾಲೆಗಳಿಗೆ ಸರಿಯಾದ ಮೂಲಭೂತ ಸೌಕರ್ಯ ಮತ್ತು ಗುಣ ಮಟ್ಟದ ಶಿಕ್ಷಣ ನೀಡಲು ವಿಫಲವಾದ ಕಾರಣದಿಂದ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಶಿವಪ್ಪ ಅವರು ಆರೋಪಿಸಿದರು.

ಸಾರ್ವಜನಿಕ ಶಿಕ್ಷಣದ ಉಳಿವಿಗಾಗಿ, ಸರ್ಕಾರಿ ಹಾಸ್ಟೆಲ್‌ಗಳ ಬಲವರ್ಧನೆಗಾಗಿ ಒತ್ತಾಯಿಸಿ ಎಸ್‌ಎಫ್‌ಐ ರಾಜ್ಯಾದ್ಯಂತ ನಡೆಸುತ್ತಿರುವ ಶೈಕ್ಷಣಿಕ ಜಾಥಾ ಶನಿವಾರ ನಗರಕ್ಕೆ ಆಗಮಿಸಿತು. ಈ ವೇಳೆ ನಗರದ ವಿಭಜಿತ ಪ್ರಧಾನ ಕಾಲೇಜಿನ ಕ್ಯಾಂಪಸ್‌ನಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 2010ರಲ್ಲಿ 72,875 ಶಾಲೆಗಳು ಮತ್ತು 2,45,337 ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದರು. 2021-22 ವೇಳೆಗೆ ರಾಜ್ಯದಲ್ಲಿ 47,386 ಶಾಲೆಗಳು ಮತ್ತು 1,45,326 ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ. ಕಳೆದ 11 ವರ್ಷದಲ್ಲಿ ರಾಜ್ಯದಲ್ಲಿ 25,489 ಶಾಲೆಗಳು ಮುಚ್ಚಲಾಗಿದೆ. 1,00,



011 ಶಿಕ್ಷಕ ಹುದ್ದೆಗಳು ಕುಂಠಿತಗೊಂಡಿವೆ ಎಂದು ಆರೋಪಿಸಿದರು.

2022-23ನೇ ಸಾಲಿನಲ್ಲಿ 45.46 ಲಕ್ಷ ವಿದ್ಯಾರ್ಥಿಗಳು ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. 2023-24ರಲ್ಲಿ 42.94 ಲಕ್ಷ ಹಾಗು 2024-25ರಲ್ಲಿ 40.74 ಲಕ್ಷ ವಿದ್ಯಾರ್ಥಿ ಗಳು ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದಾರೆ. ಸರ್ಕಾರಿ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ಶಾಲೆಗೆ ಸೇರುವವರ ಪ್ರಮಾಣ ಕಡಿಮೆಯಾಗುತ್ತಿದೆ. 5,77,00 ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ವರದಿ ಮಾಡಿದೆ ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಏಕೆ ಕಡಿಮೆಯಾಗುತ್ತಿದೆ ಎಂದು ಸರ್ಕಾರ ಅಧ್ಯಯನ ಮಾಡದೇ ದಾಖಲಾತಿ ನೆಪ ಹೇಳಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ನಾವು ಕಾಣುತ್ತಿದ್ದೇವೆ. ಹಾಗೆಯೇ ರಾಜ್ಯದಲ್ಲಿ ಕಾಲೇಜು ಶುಲ್ಕಗಳು ವಿಪರೀತ ಹೆಚ್ಚಳವಾಗಿದೆ. ಶಾಲೆ, ಕಾಲೇಜುಗಳ ಶುಲ್ಕ ಸಾವಿರದಿಂದ ಲಕ್ಷಕ್ಕೆ ಬಂದು ನಿಂತಿದೆ. ಇನ್ನು ಕೆಲವೇ ವರ್ಷಗಳಲ್ಲಿ ಕೋಟಿ ತಲುಪಿದರು ಆಶ್ಚರ್ಯಪಡುವಂತಿಲ್ಲ. ಈಗಾಗಲೇ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕೋರ್ಸ್ ಕಾಲೇಜು ಶುಲ್ಕ ಕೋಟಿ ತಲುಪಿದೆ ಎಂದು ರಾಜ್ಯ ಹಾಗು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಿಜಯ್‌ಕುಮಾರ್, ಜಿಲ್ಲಾ ಕಾರ್ಯದರ್ಶಿ ರಮೇಶ್ ಮತ್ತು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಎಂ.ಜಿ. ಮಾತನಾಡಿದರು. ಆರಂಭದಲ್ಲಿ ಜಿಲ್ಲಾ ಮುಖಂಡ ವಿವೇಕ್ ಜಾಥಾ ಕಾರ್ಯಕ್ರಮವನ್ನು ಸ್ವಾಗತಿಸಿ ಮಾತನಾಡಿದರು.

ಎಸ್‌ಎಫ್‌ಐ ರಾಜ್ಯ ಮುಖಂಡರಾದ ಅರ್ಪಿತಾ, ಹಾಸನ ಮುಖಂಡರಾದ ವಿದ್ಯಾ, ಪ್ರೇಮ್‌ದೇಶ್ ಮತ್ತಿತರರು ಭಾಗವಹಿಸಿದ್ದರು.

## ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜಿಲ್ಲೆಯ ವಿವಿಧೆಡೆ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜಿಲ್ಲೆಯ ವಿವಿಧೆಡೆ ಚಿನ್ನಾಭರಣಗಳನ್ನು ಕಳವು ಮಾಡಿರುವ ಪ್ರಕರಣ ವರದಿಯಾಗಿವೆ.

ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬೀಗ ಮುರಿದು ಒಳನುಗ್ಗಿರುವ ಕಳ್ಳರು 1.92 ಲಕ್ಷ ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಎಂ.ಹೊಸಕೊಪ್ಪಲು ಬಡಾವಣೆಯಲ್ಲಿ ನಡೆದಿದೆ.

ಬಿ.ಎನ್.ರಾಣಿ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿದೆ. ರಾಣಿ ಅವರು ಅ. 23 ರಂದು ತಾಯಿ ಪುಷ್ಪ ಅವರೊಂದಿಗೆ ಬಾಗೂರು ಹೋಬಳಿ ಭಕ್ತರಹಳ್ಳಿಗೆ ತೆರಳಿದ್ದರು. ಮಾರನೇ ದಿನ ಮನೆಗೆ ಬಂದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ಬಲವಾದ ಆಯುಧದಿಂದ ವಾರ್ಡ್‌ರೂಬ್ ಲಾಕರ್ ಮುರಿದಿರುವ ಕಳ್ಳರು 12 ಗ್ರಾಂ ತೂಕದ 3 ಜೊತೆ ಚಿನ್ನದ ಓಲೆ, 3 ಗ್ರಾಂ ತೂಕದ ಚಿನ್ನದ ತಾಳಿ, 4 ಗ್ರಾಂ ತೂಕದ ಒಂದು ಚಿನ್ನದ ಓಲೆ, 1 ಗ್ರಾಂ ತೂಕದ ಒಂದು ಚಿನ್ನದ ಮೂಗುತಿ, 250 ಗ್ರಾಂ ತೂಕದ ಒಂದು ಬೆಳ್ಳಿ ಚೊಂಬು, 150 ಗ್ರಾಂ ತೂಕದ 1 ಬೆಳ್ಳಿಯ ಲಕ್ಷ್ಮೀ ಮುಖವಾಡ, 100 ಗ್ರಾಂ ತೂಕದ ಬೆಳ್ಳಿ ತಟ್ಟೆ ಕಳವು ಮಾಡಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 1.48 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

**ಹೊಳೆನರಸೀಪುರ ವರದಿ:** ಹಿಂಬಾಗಿಲಿನಿಂದ ಹಾಡಹಗಲೇ ಮನೆಗೆ ನುಗ್ಗಿರುವ ಕಳ್ಳರು 1.48 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಗುಡ್ಡೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಶಿವಕುಮಾರ್ ಅವರು ಅ. 14ರ ಬೆಳಿಗ್ಗೆ 11.30ಕ್ಕೆ ಮನೆಗೆ ಬೀಗ ಹಾಕಿ ಹೆಂಡತಿ ಭಾಗ್ಯಮ್ಮ ಅವರೊಂದಿಗೆ ಜಮೀನು ಕೆಲಸಕ್ಕೆ ಹೋಗಿದ್ದರು. ಸಂಜೆ 7 ಗಂಟೆಗೆ ಮನೆಗೆ ಬಂದಾಗ ಹಿಂದಿನ ಬಾಗಿಲು ತೆರೆದಿರುವುದು ತಿಳಿದಿದೆ. ಬೀರುವಿನಲ್ಲಿಟ್ಟಿದ್ದ 20 ಗ್ರಾಂ ತೂಕದ ಚಿನ್ನದ ಸರ, 15 ಗ್ರಾಂ ತೂಕದ ಒಂದು ಜೊತೆ ಕಿವಿಯೊಲೆ ಮತ್ತು ಜುಮುಕಿ ಕಳುವು ಮಾಡಿದ್ದಾರೆ. ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ.

# ಮಕ್ಕಳಿಗೆ ಸ್ಥಳೀಯ ಇತಿಹಾಸ ತಿಳಿಸುವುದು ಎಲ್ಲರ ಕರ್ತವ್ಯ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಸ್ಥಳೀಯ ಇತಿಹಾಸವನ್ನು ಮಕ್ಕಳಿಗೆ ತಿಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇತಿಹಾಸದ ಅರಿವು, ಶಿಲಾ ಶಾಸನಗಳು ಹಾಗೂ ಸಾಂಸ್ಕೃತಿಕ ಮತ್ತು ಧಾರ್ಮಿಕ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಪ್ರಾಂಶುಪಾಲ ಡಾ. ಎಸ್ .ದಿನೇಶ್ ಹೇಳಿದರು.

ಶ್ರವಣಬೆಳಗೊಳದ ಎಸ್.ಎನ್. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಶನಿವಾರ ಆಯೋಜಿಸಿದ್ದ ಚಂದ್ರಗಿರಿ ಚಿಕ್ಕಬೆಟ್ಟ ದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಸಾವಿರಾರು ವರ್ಷಗಳ ಪ್ರಾಚೀನತೆ ಹೊಂದಿರುವ ಇತಿಹಾಸವನ್ನು ತಿಳಿಸುವುದು ಬಹಳ ಮುಖ್ಯವಾಗಿದ್ದು, ಶ್ರವಣಬೆಳಗೊಳದ ಸಾಂಸ್ಕೃತಿಕ, ಧಾರ್ಮಿಕ, ಐತಿಹಾಸಿಕವಾದ ಮೌಲಿಕ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕಾಗಿದೆ ಎಂದು ವಿವರಿಸಿದರು.



ಚಂದ್ರಗಿರಿ ಚಿಕ್ಕಬೆಟ್ಟವು ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮಹತ್ವ ಹೊಂದಿದ ಸ್ಥಳ. ಕ್ರಿಸ್ತ ಪೂರ್ವದಲ್ಲಿ ಆಚಾರ್ಯ ಭದ್ರಬಾಹು ಮುನಿಗಳು ಸಹಸ್ರಾರು ತ್ಯಾಗಿಗಳೊಂದಿಗೆ ಶ್ರವಣಬೆಳಗೊಳಕ್ಕೆ ಬಂದ ಉಲ್ಲೇಖವಿದೆ. ಶ್ರವಣಬೆಳಗೊಳದಲ್ಲಿ ಒಟ್ಟು 572 ಶಿಲಾ ಶಾಸನಗಳು ಇದ್ದು, ಅವುಗಳಲ್ಲಿ 271 ಶಿಲಾ ಶಾಸನಗಳು ಚಂದ್ರಗಿರಿ ಬೆಟ್ಟದಲ್ಲೆ ಇವೆ. ಪ್ರಪಂಚದಲ್ಲಿ ಅತಿ ಹೆಚ್ಚು ಶಿಲಾಶಾಸನಗಳು ಒಂದೇ ಕಡೆ ದೊರೆತಿರುವುದು ಶ್ರವಣಬೆಳಗೊಳದಲ್ಲಿ ಎಂಬುದು ಹೆಮ್ಮೆಯ ಸಂಗತಿ ಎಂದರು.

ಕನ್ನಡ ಲಿಪಿಯ ಉಗಮ, ವಿಕಾಸವನ್ನು ಅರಿಯಲು ಇಲ್ಲಿನ ಶಾಸನಗಳ ಅಧ್ಯಯನ ಬಹಳ ಮಹತ್ವ ಪಡೆದಿದೆ. ಕ್ರಿ.ಶ. 6ನೇ ಶತಮಾನದಿಂದ 19ನೇ ಶತಮಾನದ ಅವದಿಯಲ್ಲಿ ರಚಿಸಲಾದ ಶಿಲಾ ಶಾಸನಗಳು ಸೇರಿದಂತೆ 92 ಸ್ಮಾರಕಗಳಿದ್ದು, 14 ಬಸದಿಗಳು, 7 ನಿಷಧಿ ಮಂಟಪಗಳು, 2 ದೋಣೆಗಳು ಹಾಗೂ 2 ಮಾನಸ್ತಂಬಗಳು ಇಲ್ಲಿ ಲಭ್ಯವಿದೆ. ರನ್ನ ಕವಿ, ಚಾವುಂಡರಾಯ ಹಾಗೂ ಕೃಷ್ಣರಾಜೇಂದ್ರ ಒಡೆಯರ್ ಅವರ ಹಸ್ತಾಕ್ಷರವನ್ನು ಚಂದ್ರಗಿರಿ ಚಿಕ್ಕಬೆಟ್ಟದಲ್ಲಿ ಕಾಣಬಹುದು. ಇಲ್ಲಿ 61 ಜನ ತ್ಯಾಗಿಗಳು ಸಲ್ಲೇಖನ ವ್ರತ ಕೈಗೊಂಡು ಸಮಾಧಿ ಮರಣ ಹೊಂದಿರುವ ದಾಖಲೆಗಳಿವೆ ಎಂದು ಹೇಳಿದರು.

ಬಸದಿಗಳ ವಾಸ್ತುಶಿಲ್ಪ, ತೀರ್ಥಂಕರರ ಮೂರ್ತಿಗಳ ಶಿಲ್ಪಕಲೆ ಗಮನ ಸೆಳೆಯುತ್ತವೆ. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರ ಹಾಗೂ ಮೈಸೂರಿನ ಅರಸರ ಕಾಲದ ಬಸದಿಗಳು ಇಲ್ಲಿದ್ದು, ಹಲವಾರು ಧಾರ್ಮಿಕ ಹಾಗೂ ಸಾಂಸ್ಕೃತಿಕವಾದ ಮೌಲ್ವಿಕ ವಿಚಾರಗಳು ಚಂದ್ರಗಿರಿ ಚಿಕ್ಕಬೆಟ್ಟದಲ್ಲಿ ಅಡಗಿವೆ ಎಂದು ತಿಳಿಸಿದರು.

2012 ರಲ್ಲಿ ಶ್ರವಣಬೆಳಗೊಳ ಜೈನಮಠದ ಹಿಂದಿನ ಪೀಠಾಧ್ಯಕ್ಷರಾಗಿದ್ದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ಚಂದ್ರಗಿರಿ ಮಹೋತ್ಸವ ನಡೆದಾಗಿನಿಂದ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದು, ಪ್ರಸ್ತುತ ಕ್ಷೇತ್ರದ ಪೀಠಾಧ್ಯಕ್ಷರಾದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಸ್ವಾಮಿಗಳವರ ಮಾರ್ಗದರ್ಶನದಲ್ಲಿ ಮುಂದುವರಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ವೀಣಾ, ದೀಪಾ, ನವೀನ್ ಕುಮಾರ್, ಶಂಕರ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬೇರೆಡೆ ಹೋಗುವ ವೈದ್ಯರ ವಿರುದ್ಧ ಕ್ರಮ

» ಮೊದಲನೇ ಪುಟದಿಂದ

ಸಿ.ಎಸ್.ಆರ್. ಫಂಡ್‌ನಲ್ಲಿ ಸಿಟಿ ಸ್ಕ್ಯಾನಿಂಗ್ ನೀಡಲಾಗಿದೆ ಎಂದು ಹಿಮ್ಸ್ ನಿರ್ದೇಶಕ ಡಾ.ರಾಜಣ್ಣ ಅವರು ಮಾಹಿತಿ ನೀಡಿದರು.

ವೈದ್ಯಕೀಯ ಶಿಕ್ಷಣ ಹಾಗು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್.ಪಾಟೀಲ ಅವರು ನಗರದ ಡೇರಿ ವೃತ್ತದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಕ್ಕೆ ಭೇಟಿ ಪರಿಶೀಲಿಸಿದರು.

ಸಚಿವರು ನೂತನವಾಗಿ ನಿರ್ಮಾಣಗೊಂಡು ಉದ್ಘಾಟನೆಗೆ ಸಿದ್ಧವಾಗಿ ರುವ ಗ್ರಂಥಾಲಯ ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಹಿಮ್ಸ್ ನಿರ್ದೇಶಕರಾದ ಡಾ|| ರಾಜಣ್ಣ, ಆಡಳಿತ ಪರಿಷತ್ ಸದಸ್ಯ ರವೀಶ್, ವೈದ್ಯಕೀಯ ಅಧೀಕ್ಷಕ ಡಾ|| ರಾಘವೇಂದ್ರ ಪ್ರಸಾದ್, ಡಾ|| ರವಿಕುಮಾರ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ|| ನಾಗಪ್ಪ, ಮುಖ್ಯ ಆಡಳಿತಾಧಿಕಾರಿ ರೇಖಾ ಉಪಸ್ಥಿತರಿದ್ದರು.

# ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆ ಸಮರ್ಥ ಕೆಲಸ

• ಪ್ರಜೋದಯ ವರದಿ

**ಹಳೇಬೀಡು:** ಹೆಣ್ಣುಮಕ್ಕಳು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರೆ. ಸೈನಿಕರಾಗಿ, ಜಿಲ್ಲಾಧಿಕಾರಿಗಳಾಗಿ, ಪೊಲೀಸ್ ವರಿಷ್ಠಾಧಿಕಾರಿಗಳಾಗಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ವಕೀಲ ಪುಟ್ಟಸ್ವಾಮಿಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನಡೆದ ಮಿಷನ್ ಶಕ್ತಿ ಯೋಜನೆಯ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಯಸ್ಸಾದ ತಂದೆ ತಾಯಿಗಳನ್ನು ನೋಡಿಕೊಳ್ಳುವಲ್ಲಿ ಹೆಣ್ಣುಮಕ್ಕಳೇ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಹೀಗಿರುವಾಗ ಹೆಣ್ಣುಮಕ್ಕಳನ್ನ ಭ್ರೂಣದಲ್ಲಿಯೇ ಕೊಲ್ಲುವುದು ಅಕ್ಷಮ್ಯ ಅಪರಾಧವಾಗಿದೆ. ಕಾನೂನಿನ ಅಡಿಯಲ್ಲಿ ಇದಕ್ಕೆ ಕಠಿಣ ಶಿಕ್ಷೆಗಳಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಳೇಬೀಡು ಸರ್ಕಾರಿ ಆಸ್ಪತ್ರೆಯ ಜಿಲ್ಲಾ ಮಿಷನ್ ಶಕ್ತಿ ಯೋಜನಾ ಕಾರ್ಯಕ್ರಮದ ಸಂಯೋಜಕರಾದ ರೂಪವತಿ ಹೆಣ್ಣುಮಕ್ಕಳ ಲೈಂಗಿಕ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು.




ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ತಂಬಾಕು ನಿಯಂತ್ರಣ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ವಿಮಲಾ ಅವರು ತಂಬಾಕು ಸೇವನೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು.

ಹಳೇಬೀಡು ಸರ್ಕಾರಿ ಆಸ್ಪತ್ರೆಯಲ್ಲಿ ಆಪ್ತ ಸಮಾಲೋಚಕಿ ಆಗಿರುವ ರೇಖಾ ಅವರು ಹಾಲಿನ ಮಹತ್ವ ಕುರಿತು ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆಪಿಎಸ್ ಶಾಲೆಯ ಪ್ರಭಾರಿ ಉಪ ಪ್ರಾಂಶುಪಾಲ ಮೋಹನ್ ರಾಜ್ ಅವರು ಮಾತನಾಡಿ, ಸರ್ಕಾರವು ಮಕ್ಕಳ ಹಾಗೂ ಮಹಿಳೆಯರ ಸಂರಕ್ಷಣೆಯಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು ಶಾಲೆಯ ಆಡಳಿತ ವರ್ಗ ಹಾಗೂ ಮಕ್ಕಳು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳಿದರು.

ಶಿಕ್ಷಕ ಶಶಿಧರ್ ಅವರು ಕಾರ್ಯಕ್ರಮ ನಿರೂಪಿಸಿದರು. ಕೆಪಿಎಸ್ ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹಾಗೂ ಹೆಚ್ಚಿನ ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಎಸ್‌ಬಿಎಂ ಉದ್ಯಾನವನದಲ್ಲಿ ಗಿಡ ನೆಡುವ ಕಾರ್ಯಕ್ರಮ




• ಪ್ರಜೋದಯ ವರದಿ

**ಹಾಸನ:** ನಗರದ ಬಿ.ಕಾಟೀಹಳ್ಳಿ ಎಸ್‌ಬಿಎಂ ಉದ್ಯಾನವನದಲ್ಲಿ ಶನಿವಾರ ಹಾಸನಾಂಬ ಲಯನ್ಸ್ ಕ್ಲಬ್ ವತಿಯಿಂದ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎಸ್‌ಬಿಎಂ ಬಡಾವಣೆ ಅಧ್ಯಕ್ಷ ರಂಗೇಗೌಡ ಅವರು ಮಾತನಾಡಿ, ಎಸ್‌ಬಿಎಂ ಬಡಾವಣೆ ಅನೇಕ ಸಮಸ್ಯೆಗಳಿಂದ ಬಳಲುತ್ತಿದೆ. ಮುಂದಿನ ದಿನಗಳಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಖುದ್ದು ಭೇಟಿಯಾಗಿ ಸಮಸ್ಯೆ ಗಮನಕ್ಕೆ ತರಲಾಯಿತು. ಮಹಾನಗರ ಪಾಲಿಕೆ ಅಧಿಕಾರಿ ಹಾಗು ಜನಪ್ರತಿನಿಧಿಗಳನ್ನು ಭೇಟಿ ಮಾಡಲಾಗಿದೆ. ಹಂತ ಹಂತವಾಗಿ ಮೂಲ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ವಹಿಸಲಾಗುವುದೆಂದರು.

ಲಯನ್ಸ್ ಕ್ಲಬ್ ಮುಖ್ಯಸ್ಥ ಉಡುಪಿ ಅರವಿಂದ್ ಅವರ ನೇತೃತ್ವದಲ್ಲಿ 70ಕ್ಕೂ ಹೆಚ್ಚು ಗಿಡ ನೆಡಲಾಯಿತು. ಹಾಸನಾಂಬ ಲಯನ್ಸ್ ಕ್ಲಬ್ ಅಧ್ಯಕ್ಷ ಮೋಹನ್ ಕುಮಾರ್, ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಹರೀಶ್, ಎಸ್‌ಬಿಎಂ ಬಡಾವಣೆ ಅಧ್ಯಕ್ಷ ರಂಗೇಗೌಡ, ಕಾರ್ಯದರ್ಶಿ ಶಿವೇಗೌಡ, ಉಪಾಧ್ಯಕ್ಷ ಸುರೇಶ್, ರಾಮಸ್ವಾಮಿ, ರಂಗಸ್ವಾಮಿ, ಸತೀಶ್ ಇತರರಿದ್ದರು.

# ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿ: ಭಾರತಕ್ಕೆ ಭರ್ಜರಿ ಗೆಲುವು

• ಪ್ರಜೋದಯ ವರದಿ

**ಸಿಡ್ನಿ:** ರೋಹಿತ್ ಶರ್ಮಾ ಅವರ ಭರ್ಜರಿ ಶತಕ ಹಾಗೂ ವಿರಾಟ್ ಕೊಹ್ಲಿಯವರ ಸೊಗಸಾದ ಅರ್ಧಶತಕದ ನೆರವಿನಿಂದ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ 9 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಮೊದಲ ಎರಡು ಪಂದ್ಯದಲ್ಲಿ ಸೋತಿದ್ದ ಭಾರತ ಈ ಪಂದ್ಯದಲ್ಲಿ ಶಿಸ್ತಿನ ಬೌಲಿಂಗ್ ದಾಳಿ ಹಾಗೂ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿತು. ರೋಕೊ ಜೋಡಿ ಮುರಿಯದ ಎರಡನೇ ವಿಕೆಟ್‌ಗೆ 169 ಎಸೆತಗಳಲ್ಲಿ 168 ರನ್‌ಗಳ ಜೊತೆಯಾಟ ನಡೆಸಿತು.

ಆಸ್ಟ್ರೇಲಿಯಾ ಒಡ್ಡಿದ 237 ರನ್‌ಗ ಗುರಿಯನ್ನು ಬೆನ್ನಟ್ಟಿದ ಭಾರತಕ್ಕೆ ಉತ್ತಮ ಆರಂಭ ಲಭಿಸಿತು. ಮೊದಲ ವಿಕೆಟ್‌ಗೆ ರೋಹಿತ್ ಹಾಗೂ ಶುಭಮನ್ 69 ರನ್‌ಗಳನ್ನು ಪೇರಿಸಿದರು. ಇದರಲ್ಲಿ ಗಿಲ್ ಕೊಡುಗೆ 24. ಇದಾದ ಬಳಿಕ ರೋಹಿತ್ ಮತ್ತು ಕೊಹ್ಲಿ ಪಂದ್ಯವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಉಭಯ ಆಟಗಾರರು ಮನಮೋಹಕ ಹೊಡೆತಗಳ ಮೂಲಕ ರಂಜಿಸಿದರು. ದೀರ್ಘ ಕಾಲದ ಬಳಿಕ ಈ ಜೋಡಿಯ ಇನಿಂಗ್ಸ್ ನೋಡಿ ಪ್ರೇಕ್ಷಕರು ಹರ್ಷ ವ್ಯಕ್ತಪಡಿಸಿದರು.

ಇವರಿಬ್ಬರ ಪೋಸ್ಟರ್ ಹಿಡಿದುಕೊಂಡು ಕುಣಿದು ಸಂಭ್ರಮಿಸಿದರು.



ರೋಹಿತ್ ಶರ್ಮಾ ಅವರ 121 ರನ್‌ಗಳ ಇನಿಂಗ್ಸ್ 125 ಎಸೆತಗಳಲ್ಲಿ ಬಂದಿತು. ಇದರಲ್ಲಿ 13 ಬೌಂಡರಿ ಹಾಗೂ 3 ಸಿಕ್ಸರ್ ಗಳಿದ್ದವು. 81 ಎಸೆತಗಳಲ್ಲಿ 74 ರನ್ ಗಳಿಸಿದ ಕೊಹ್ಲಿ ಇನಿಂಗ್ಸ್‌ನಲ್ಲಿ 7 ಬೌಂಡರಿಗಳಿದ್ದವು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡ ಹರ್ಷಿತ್ ರಾಣಾ (39/4) ಬೌಲಿಂಗ್ ದಾಳಿಗೆ ಸಿಲುಕಿ, 46.4 ಓವರ್‌ಗಳಲ್ಲಿ 236 ರನ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ಆಸ್ಟ್ರೇಲಿಯಾ ಪರ ಆರಂಭಿಕ ಬ್ಯಾಟರ್‌ಗಳಾದ ಮಿಚಲ್ ಮಾರ್ಷ್ ಹಾಗೂ ಟ್ರಾವಿಸ್ ಹೆಡ್ ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 61 ರನ್‌ಗಳ ಜೊತೆಯಾಟ ಆಡಿದರು. ಈ ಹಂತದಲ್ಲಿ 29 ರನ್ ಗಳಿಸಿದ್ದ ಹೆಡ್ ಸಿರಾಜ್‌ಗೆ ವಿಕೆಟ್ ಒಪ್ಪಿಸಿ ಹೊರನಡೆದರು.

ನಂತರ ಬಂದ ಮ್ಯಾಥ್ಯೂ ಶಾರ್ಟ್ (30 ), ನಾಯಕ ಮಿಚೆಲ್ ಮಾರ್ಷ್ (41) ಹಾಗೂ ರೆನ್‌ಶಾ (56) ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಮಧ್ಯಮ ಕ್ರಮಾಂಕದಲ್ಲಿ ಅಲೆಕ್ಸ್ ಕ್ಯಾರಿ (24) ಹಾಗೂ ಕೂಪರ್ ಕೊನೊಲಿ (23) ರನ್ ಗಳಿಸಿ ತಂಡದ ಮೊತ್ತ 200ರ ಗಡಿದಾಟಲು ನೆರವಾದರು.

ಈ ಸರಣಿಯನ್ನು 21 ಅಂತರದಿಂದ ಆಸ್ಟ್ರೇಲಿಯಾ ಜಯಿಸಿತು.

## ಹಳೆಯ ದಾಖಲೆ ಸರಿಗಟ್ಟಿದ ಕೊಹ್ಲಿ-ಶರ್ಮಾ

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮ ಅವರು ಆಸ್ಟ್ರೇಲಿಯಾ ವಿರುದ್ಧ ಸದಾ ನೆನಪಿನಲ್ಲುಳಿವಂಥ ಇನ್ನಿಂಗ್ಸ್ ಆಡಿದರು. ಜೊತೆಗೇ ಈ ಪಂದ್ಯವನ್ನು ಆಡುವ ಮೂಲಕ ಸಚಿನ್ ತೆಂಡೂಲ್ಕರ್ ಮತ್ತು ರಾಹುಲ್ ದ್ರಾವಿಡ್ ಅವರ 13 ವರ್ಷಗಳ ಹಳೆಯ ದಾಖಲೆಯನ್ನು ಸರಿಗಟ್ಟಿದ್ದಾರೆ. ಭಾರತದ ಪರವಾಗಿ ಅತಿ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳನ್ನು ಜೊತೆಯಾಗಿ ಆಡಿದ ದಾಖಲೆ ಈವರೆಗೆ ಸಚಿನ್ ಮತ್ತು ದ್ರಾವಿಡ್ ಅವರ ಹೆಸರಲ್ಲಿತ್ತು. 16 ವರ್ಷಗಳ ಕಾಲ 391 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇಬ್ಬರೂ ಒಟ್ಟಿಗೆ ಆಡಿದ್ದರು. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಈಗ ಒಟ್ಟಿಗೆ ಆಡಿದ ಅತಿ ಹೆಚ್ಚು ಅತಾರಾಷ್ಟ್ರೀಯ ಪಂದ್ಯಗಳ ಭಾರತೀಯ ಜೋಡಿಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಸಿಡ್ನಿಯಲ್ಲಿ ಅವರಿಬ್ಬರೂ ಜೊತೆಯಾಗಿ 391ನೇ ಪಂದ್ಯವನ್ನಾಡುವ ಮೂಲಕ ಅವರು ಸಚಿನ್ ಮತ್ತು ದ್ರಾವಿಡ್ ಅವರೊಂದಿಗೆ ಮೊದಲ ಸ್ಥಾನ ಹಂಚಿಕೊಂಡಿದ್ದಾರೆ. ಜೊತೆಗೆ ತಂಡದ ಜಯಕ್ಕೆ ಕಾರಣವಾಗುವ ಮೂಲಕ ಈ ಪಂದ್ಯವನ್ನು ಮತ್ತಷ್ಟು ಸ್ಮರಣೀಯವಾಗಿಸಿದರು.

### ಒಂದು ಪಂದ್ಯ ಆಡಿದಲ್ಲಿ ಒಂದನೇ ಸ್ಥಾನಕ್ಕೆ

ದಕ್ಷಿಣ ಆಫ್ರಿಕಾ ವಿರುದ್ಧ ಮುಂದಿನ ತಿಂಗಳು ನಡೆಯಲಿರುವ ಏಕದಿನ ಸರಣಿಯಲ್ಲಿ ಇಬ್ಬರೂ ಪಂದ್ಯವನ್ನಾಡಿದರೆ ಈ ದಾಖಲೆ ಸಂಪೂರ್ಣವಾಗಿ ಇವರ ಹೆಸರಿಗೆ ವರ್ಗಾವಣೆಯಾಗಲಿದೆ. ನಂತರದ ಸ್ಥಾನಗಳಲ್ಲಿ ಸೌರವ್ ಗಂಗೂಲಿ- ರಾಹುಲ್ ದ್ರಾವಿಡ್ (369 ಪಂದ್ಯ), ಸಚಿನ್ ತೆಂಡೂಲ್ಕರ್- ಅನಿಲ್ ಕುಂಬ್ಳೆ 367 ಪಂದ್ಯ), ಸಚಿನ್ ತೆಂಡೂಲ್ಕರ್ -ಸೌರವ್ ಗಂಗೂಲಿ(341 ಪಂದ್ಯ) ಅವರು ಇದ್ದಾರೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಸಚಿನ್ ತೆಂಡೂಲ್ಕರ್ ಮತ್ತು ರಾಹುಲ್ ದ್ರಾವಿಡ್ ಅವರೊಂದಿಗೆ ಆಡಿದ್ದಾರೆ ಎಂಬುದು ಸಹ ವಿಶೇಷ. ರೋಹಿತ್ ಶರ್ಮಾ ಅವರು 2007ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದರು. ವಿರಾಟ್ ಅವರ ಏಕದಿನ ಪದಾರ್ಪಣೆ ಪಂದ್ಯದಲ್ಲಿ ರೋಹಿತ್ ಶರ್ಮಾ ಅವರೂ ಅಂತಿಮ ಹನ್ನೊಂದರ ಬಳಗದಲ್ಲಿದ್ದು ವಿಶೇಷವಾಗಿತ್ತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019